
ವಿಕ್ರಮ ವಿಸಾಜಿ

ಚೆನ್ನವೀರ ಕಣವಿ

ಕವಿ ಕಾವ್ಯ ದರ್ಶನ



ನಾಡೋಜ ಚೆನ್ನವೀರ ಕಣವಿ

ಹುಟ್ಟಿದ್ದು ೨೮, ಜೂನ್ ೧೯೨೮, ಧಾರವಾಡ ಜಿಲ್ಲೆಯ (ಈಗ ಗದಗ) ಹೊಂಬಳದಲ್ಲಿ. ಧಾರವಾಡದಲ್ಲಿ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣ. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಪ್ರಸಾರಾಂಗದ ನಿರ್ದೇಶಕರಾಗಿ ಸೇವೆ. 'ಕಾವ್ಯಾಕ್ಷಿ', 'ಭಾವಜೀವಿ', 'ಆಕಾಶಬುಟ್ಟಿ', 'ಮಧುಚಂದ್ರ', 'ಮಣ್ಣಿನ ಮೆರವಣಿಗೆ', 'ನೆಲಮುಗಿಲು', 'ನಗರದಲ್ಲಿ ಬೆಳಕು', 'ಶಿಶಿರದಲ್ಲಿ ಬಂದ ಸ್ನೇಹಿತ', 'ಸಾಹಿತ್ಯ ಚಿಂತನ', 'ನಮ್ಮೆಲ್ಲರ ನೆಹರೂ', 'ಮಧುರಚೆನ್ನ', 'ಕಾವ್ಯಾನುಸಂಧಾನ' ಪ್ರಮುಖ ಕೃತಿಗಳು. 'ವಿಶ್ವಭಾರತಿಗೆ ಕನ್ನಡದಾರತಿ', 'ಹೂವು ಹೊರಳುವವು ಸೂರ್ಯನ ಕಡೆಗೆ'... ಮುಂತಾದವು ಪ್ರಖ್ಯಾತ ಕವಿತೆಗಳು. ನಾಲ್ಕೂ ಸಾಹಿತ್ಯಕ ಚಳುವಳಿಗಳಿಗೆ ಪ್ರತಿಸ್ಪಂದನೆಯಾಗಿ ಸಾಹಿತ್ಯ ನಿರ್ಮಿಸಿದ ಚೆನ್ನವೀರ ಕಣವಿ ಮತ್ತು ಜಿ. ಎಸ್. ಶಿವರುದ್ರಪ್ಪನವರನ್ನು ಸಮನ್ವಯ ಕವಿಗಳೆಂದು ಗುರುತಿಸಲಾಗುತ್ತದೆ. ಸಾಹಿತ್ಯಿಕವಾಗಿ ಮಾತ್ರವಲ್ಲದೆ, ತಮ್ಮ ಸಾಮಾಜಿಕ ಕೆಲಸ ಹಾಗೂ ಸರಳ ಸಜ್ಜನಿಕೆಯ ವ್ಯಕ್ತಿತ್ವದಿಂದಾಗಿ ಎಲ್ಲೆಡೆ ಚಿರಪರಿಚಿರಾಗಿದ್ದಾರೆ. ಹಾಸನದಲ್ಲಿ ೧೯೯೬ರಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ರಾಜ್ಯ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿ, ಗೌರವಗಳು ಸಂದಿವೆ.

ವಿಕ್ರಮ ವಿಸಾಜಿ

ಹುಟ್ಟಿದ್ದು ಬೀದರ ಜಿಲ್ಲೆಯ ಭಾಲ್ಕಿಯಲ್ಲಿ. ಕವಿ, ನಾಟಕಕಾರ ಮತ್ತು ವಿಮರ್ಶಕ. ಗುಲಬರ್ಗಾ ವಿಶ್ವವಿದ್ಯಾಲಯದಿಂದ ಎಂ.ಎ., ಪಿಎಚ್.ಡಿ. ಪದವಿ. ಚಂದ್ರಶೇಖರ ಕಂಬಾರರ ಕಾವ್ಯ ಕುರಿತು ಸಂಶೋಧನಾ ಅಧ್ಯಯನ. ಗುಲಬರ್ಗಾ ವಿಶ್ವವಿದ್ಯಾಲಯದ ರಾಯಚೂರು, ಸಂಡೂರು ಸ್ನಾತಕೋತ್ತರ ಕೇಂದ್ರಗಳಲ್ಲಿ ಅಧ್ಯಾಪನದ ಕೆಲಸ. ಸದ್ಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕನ್ನಡ ವಿಭಾಗದದಲ್ಲಿ ಪ್ರಾಧ್ಯಾಪಕ.

ಪ್ರಕಟಿತ ಕೃತಿಗಳು: ಗಾಳಿಪಟ, ನನ್ನ ಸುತ್ತಲಿನ ಜನ (ಮಕ್ಕಳ ಕವಿತಾ ಸಂಗ್ರಹ), ನೀವೇಕೆ ಕತ್ತಲೆ ಕಡೆ?, ತಮಾಷಾ, ಗೂಡು ಕಟ್ಟುವ ಚಿತ್ರ (ಕವನ ಸಂಗ್ರಹಗಳು), ಬೆಳಗಿನ ಮುಖ (ವಿಮರ್ಶೆ), ನಾದಗಳು ನುಡಿಯಾಗಲೇ (ಸಂಶೋಧನೆ), ರಸಗಂಗಾಧರ (ನಾಟಕ), ಕಂಬಾರರ ನಾಟಕಗಳು, ಮತ್ತೆ ಬಂತು ಶ್ರಾವಣ (ಸಂಪಾದನೆ), ಗ್ರೀಕ್ ಹೊಸ ಕಾವ್ಯ (ಪ್ರೊ. ವಿಜಯಾ ಗುತ್ತಲ ಅವರೊಂದಿಗೆ ಆಧುನಿಕ ಗ್ರೀಕ್ ಕವಿತೆಗಳ ಅನುವಾದ), ಇಂದ್ರಸಭಾ (ಇತರರೊಂದಿಗೆ ಉರ್ದು ನಾಟಕದ ಅನುವಾದ). ಇಂಗ್ಲಿಷ್, ಹಿಂದಿ, ಮರಾಠಿಯಿಂದ ಕೆಲ ಕವಿತೆ, ಲೇಖನಗಳ ಅನುವಾದ.


ಗುಲಬರ್ಗಾ ವಿಶ್ವವಿದ್ಯಾಲಯ ಪ್ರಸಾರಾಂಗದಿಂದ ಮೂರು ಸಲ ಪುಸ್ತಕ ಬಹುಮಾನ, ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀವಿಜಯ ಸಾಹಿತ್ಯ ಪ್ರಶಸ್ತಿ, ಕೋಲ್ಕತ್ತಾದ ಭಾರತೀಯ ಭಾಷಾ ಪರಿಷತ್ತಿನ ಯುವ ಪುರಸ್ಕಾರ. ಅಮ್ಮ ಪುಸ್ತಕ ಬಹುಮಾನ.

ಅಕ್ಕರ ಮಲ್ಲಿಗೆ – 6

ಶ್ರೀ ಚೆನ್ನವೀರ ಕಣವಿ

ಕವಿ ಕಾವ್ಯ ದರ್ಶನ

ವಿಕ್ರಮ ವಿಸಾಜಿ



ಕರ್ನಾಟಕ ಸರ್ಕಾರ
ಕೆ. ಎಸ್. ನರಸಿಂಹಸ್ವಾಮಿ ಟ್ರಸ್ಟ್ (ರಿ.)
ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಚೇರಿ ಆವರಣ, ಮಂಡ್ಯ

Channaveera Kanavi: Kavi Kavya Darshana :
Introduction to Poet Channaveera Kanvavi by **Vikrama Visaji**
Published by **K. S. Narasimhaswamy Trust (R).**
Dept of Kannada and Culture office premises,
Nalvadi Krishnaraja Wodeyar Kala Bhavan, Mandya.
First Impression 2018 Pages 32 Price: 25/-

ಸಂಪರ್ಕ:
ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ (ರಿ).
22/4, ಪೂರ್ವ ಆಂಜನೇಯ ದೇವಸ್ಥಾನ ರಸ್ತೆ,
ಬಸವನಗುಡಿ, ಬೆಂಗಳೂರು – 560 004
ಮೊಬೈಲ್: 9916796832

ಪ್ರಧಾನ ಸಂಪಾದಕರು:
ನರಹಳ್ಳಿ ಬಾಲಸುಬ್ರಹ್ಮಣ್ಯ

ಪ್ರಕಟಣಾ ಸಮಿತಿ:
ಕಿಕ್ಕೇರಿ ಕೃಷ್ಣಮೂರ್ತಿ
ಎಂ. ಎನ್. ಸುಬ್ರಹ್ಮಣ್ಯ
ಮೇಖಲಾ ವೆಂಕಟೇಶ್
ನಗರ ಶ್ರೀನಿವಾಸ ಉಡುಪ

ಮುಖಪುಟ ಚಿತ್ರ : ಅಂತರ್ಜಾಲ ಕೃಪೆ

ಮುಖಪುಟ ಮತ್ತು ಪುಸ್ತಕ ವಿನ್ಯಾಸ: ಎಂ. ಆರ್. ಗುರುಪ್ರಸಾದ್

ಮುದ್ರಣ: ಧರಣಿ ಪ್ರಿಂಟರ್ಸ್, ಬೆಂಗಳೂರು.

ಕೆ. ಎಸ್. ನರಸಿಂಹಸ್ವಾಮಿ ಟ್ರಸ್ಟ್ (ರಿ.)

ಮೈಸೂರು ಮಲ್ಲಿಗೆಯ ಕವಿ ಕೆ. ಎಸ್. ನರಸಿಂಹಸ್ವಾಮಿ ಅವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ ಅಧ್ಯಕ್ಷತೆಯಲ್ಲಿ ಟ್ರಸ್ಟ್ ಆರಂಭಿಸಿತು. ಕೆ.ಎಸ್.ನ. ಅವರ ಹುಟ್ಟೂರಾದ ಮಂಡ್ಯ ಜಿಲ್ಲೆಯ ಕಿಕ್ಕೇರಿಯನ್ನು ಸಾಂಸ್ಕೃತಿಕ ಕೇಂದ್ರವಾಗಿಸಲು ಅಲ್ಲಿನ ೬೫೦ಕ್ಕೂ ಹೆಚ್ಚು ಎಕರೆ ವಿಸ್ತಾರವಾದ ಕೆರೆಯನ್ನು ಕೆ.ಎಸ್.ನ. ಸರೋವರವನ್ನಾಗಿ ಮಾರ್ಪಡಿಸುವುದು, ಅವರು ಹುಟ್ಟಿದ ಮನೆಯನ್ನು ರಾಷ್ಟ್ರೀಯ ಸಂಗ್ರಹಾಲಯವನ್ನಾಗಿಸುವುದು, ಕೆ.ಎಸ್.ನ. ಪತ್ನಿ ಶ್ರೀಮತಿ ವೆಂಕಮ್ಮ ಅವರ ಹೆಸರಿನಲ್ಲಿ 'ನಿನ್ನೊಲುಮೆಯಿಂದಲೇ' ಗೌರವ, ಯುವ ಸಂಶೋಧಕರನ್ನು ಪ್ರೋತ್ಸಾಹಿಸಲು 'ಕೆ.ಎಸ್.ನ. ಅಧ್ಯಯನ ಪುರಸ್ಕಾರ', ಕಾವ್ಯಗಾಯನ, ಸಾಹಿತ್ಯ ರಚನೆ ಮತ್ತು ಪ್ರಸಾರಣೆಯಲ್ಲಿ ತೊಡಗಿಕೊಂಡ ಮೇರು ಪ್ರತಿಭೆಗಳನ್ನು ಗುರುತಿಸಿ ಗೌರವಿಸುವುದು. ಹೊಸ ಜನಾಂಗದಲ್ಲಿ ಸಾಹಿತ್ಯ, ಸಂಗೀತ, ನಾಟಕ ಮುಂತಾದವುಗಳಲ್ಲಿ ಅಭಿರುಚಿ ಬೆಳೆಸುವುದು, ಕೆ. ಎಸ್. ನ. ಸಾಹಿತ್ಯವನ್ನು ಮನೆ-ಮನಗಳಿಗೆ ತಲುಪಿಸುವುದು ಟ್ರಸ್ಟ್‌ನ ಕೆಲವು ಯೋಜನೆಗಳು.

ಎಲ್ಲರಿಗೊಳಿತನು ಬಯಸಲಿ ಕವನ – ಕೆ.ಎಸ್.ನ.

ಕೆ. ಎಸ್. ನರಸಿಂಹಸ್ವಾಮಿ ಟ್ರಸ್ಟ್ (ರಿ)

ಮಲ್ಲಿಗೆಯ ನುಡಿ...

ಕೆ. ಎಸ್. ನರಸಿಂಹಸ್ವಾಮಿ ಟ್ರಸ್ಟ್ (ರಿ) ಹಮ್ಮಿಕೊಂಡಿರುವ ಹಲವು ಯೋಜನೆಗಳಲ್ಲಿ ಪುಸ್ತಕ ಪ್ರಕಟಣೆ ಹೆಚ್ಚು ಮಹತ್ವದ್ದು. ಪುಸ್ತಕ ಪ್ರಕಟಣೆಯೆಂಬುದು ಕುವೆಂಪು ಹೇಳುವ ಹಾಗೆ– ಜ್ಞಾನ ಸಾಧನೆಯ ಮಾರ್ಗ. ನಮ್ಮ ಶಿಕ್ಷಣ ಕ್ರಮದಲ್ಲಿ ಜ್ಞಾನ ಸಾಧನೆ ವಿಶ್ವವಿದ್ಯಾಲಯಗಳಿಗೆ ಸೀಮಿತವಾಗಿಬಿಟ್ಟಿದೆ. ಹಾಗಲ್ಲದೆ, ಜ್ಞಾನ ಸಾಮಾನ್ಯ ಜನರಿಗೂ ತಲುಪಬೇಕೆಂದರೆ ಅದಕ್ಕಿರುವ ಅತ್ಯುತ್ತಮ ಮಾರ್ಗ ಪುಸ್ತಕ. ಇದು ಜನರ ಬಳಿಗೆ ಜ್ಞಾನವನ್ನು ತೆಗೆದುಕೊಂಡು ಹೋಗುವ ಪರಿಣಾಮಕಾರಿ ಹಾದಿ. ಕೈಗೆಟುಕುವ ಬೆಲೆಯಿಟ್ಟು ನಾವು ಪ್ರಕಟಿಸುವ ಪುಸ್ತಕಗಳು ಹಳ್ಳಿಹಳ್ಳಿಯ ಸಾಮಾನ್ಯ ಜನರನ್ನೂ ತಲುಪುವಂತಾಗಬೇಕು, ಆ ಮೂಲಕ ಅವರು ತಿಳಿವಳಿಕೆ ಪಡೆಯುವಂತಾಗಬೇಕು. ಇದು ಟ್ರಸ್ಟ್‌ನ ಪ್ರಮುಖ ಆಶಯ.

ಮೊದಲಿಗೆ ಕೆ. ಎಸ್. ನರಸಿಂಹಸ್ವಾಮಿಯವರ ಎಲ್ಲ ಪ್ರಕಟಿತ ಹಾಗೂ ಅಪ್ರಕಟಿತ ಸಾಹಿತ್ಯ ಹಾಗೂ ಅವರ ಬಗೆಗಿನ ಅಧ್ಯಯನದ ಆಕರ ಸಾಹಿತ್ಯವನ್ನು ಆಸಕ್ತ ಓದುಗರಿಗೆ ಸುಲಭವಾಗಿ ದೊರೆಯುವಂತೆ ಮಾಡುವುದು ಟ್ರಸ್ಟ್‌ನ ಪ್ರಮುಖ ಆಶಯ. ಜೊತೆಜೊತೆಗೆ ಜಗತ್ತಿನ ಜ್ಞಾನವನ್ನೂ ಕನ್ನಡದಲ್ಲಿ ನಮ್ಮ ಜನರಿಗೆ ತಲುಪಿಸುವ ಹಂಬಲವೂ ಟ್ರಸ್ಟ್‌ಗೆ ಇದೆ.

2016ರಿಂದ ಕೆ.ಎಸ್.ನ. ಪ್ರಶಸ್ತಿಯನ್ನು ಹಿರಿಯ ಕವಿಯೊಬ್ಬರಿಗೆ ನೀಡಲಾಗುತ್ತಿದೆ. ಈ ಪ್ರಶಸ್ತಿ ರೂ. 25 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿರುತ್ತದೆ. ಮೊದಲಿಗೆ ಈ ಪ್ರಶಸ್ತಿಯನ್ನು ಕೆ. ಎಸ್. ನಿಸಾರ್ ಅಹಮದ್ ಅವರಿಗೂ, 2017ರಲ್ಲಿ ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರಿಗೂ ನೀಡಲಾಗಿತ್ತು. 2018ರ ಕೆ.ಎಸ್.ನ. ಪ್ರಶಸ್ತಿಯನ್ನು ಶ್ರೀ ಚೆನ್ನವೀರ ಕಣವಿ ಅವರಿಗೆ ನೀಡಲಾಗಿದ್ದು, ಹೀಗೆ ಪ್ರಶಸ್ತಿ ಪುರಸ್ಕೃತರ ಬಗೆಗೆ ಒಂದು ಕಿರು ಹೊತ್ತಿಗೆಯನ್ನು ಹೊರತರಲು ಟ್ರಸ್ಟ್ ನಿರ್ಧರಿಸಿದ್ದು, ಚೆನ್ನವೀರ ಕಣವಿ ಅವರ ಕುರಿತು ಪರಿಚಯಾತ್ಮಕ ಪುಸ್ತಕವನ್ನು ಪ್ರಕಟಿಸಿದೆ. ಸಕಾಲದಲ್ಲಿ ಈ ಪುಸ್ತಕವನ್ನು ಸಿದ್ಧಪಡಿಸಿಕೊಟ್ಟ ಹೊಸ ತಲೆಮಾರಿನ ಕವಿ–ವಿಮರ್ಶಕ ವಿಕ್ರಮ ವಿಸಾಜಿ ಅವರಿಗೆ ಧನ್ಯವಾದಗಳು ಮತ್ತು ಟ್ರಸ್ಟ್‌ನ ಎಲ್ಲ ಸದಸ್ಯರಿಗೆ, ಮುದ್ರಣ ಕೆಲಸದಲ್ಲಿ ಕೈಜೋಡಿಸಿದ ಎಲ್ಲರಿಗೆ ಟ್ರಸ್ಟ್ ಆಭಾರಿ.

ನರಹಳ್ಳಿ ಬಾಲಸುಬ್ರಹ್ಮಣ್ಯ

ಅಧ್ಯಕ್ಷರು, ಕೆ. ಎಸ್. ನರಸಿಂಹಸ್ವಾಮಿ ಟ್ರಸ್ಟ್ (ರಿ)

ಅರಿಕೆ

ಕೆ. ಎಸ್. ನರಸಿಂಹಸ್ವಾಮಿ ಟ್ರಸ್ಟ್ (ರಿ) ಕಳೆದ ಎರಡು ವರ್ಷಗಳಿಂದ ಕ್ರಿಯಾಶೀಲವಾಗಿದ್ದು, ಕೆಲವು ಅಪರೂಪದ ಕಾರ್ಯಯೋಜನೆಯನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಿರ್ವಹಿಸುತ್ತಿರುವುದನ್ನು ಗಮನಿಸುತ್ತಿದ್ದೇನೆ. ಶ್ರದ್ಧೆ, ಪ್ರೀತಿ ಟ್ರಸ್ಟ್‌ನ ಎಲ್ಲ ಕೆಲಸಗಳ ಹಿಂದೆ ಎದ್ದು ಕಾಣುತ್ತದೆ.


2018ನೆಯ ಸಾಲಿನ ಕೆ. ಎಸ್. ನರಸಿಂಹಸ್ವಾಮಿ ಪ್ರಶಸ್ತಿ ಪುರಸ್ಕೃತರಾದ ಶ್ರೀ ಚೆನ್ನವೀರ ಕಣವಿ ಅವರ ಕುರಿತ ಪುಟ್ಟ ಪುಸ್ತಕವನ್ನು ಸಿದ್ಧಪಡಿಸಿಕೊಡಲು ಟ್ರಸ್ಟ್ ಕೇಳಿಕೊಂಡಾಗ 'ಇಲ್ಲ' ಎನ್ನಲು ಆಗಲಿಲ್ಲ. ಸಮಯ ಮತ್ತು ಸ್ಥಳಾವಕಾಶದ ಕಾರಣದಿಂದಾಗಿ ಕಣವಿಯವರ ಕಾವ್ಯದರ್ಶನದ ಸಂಕ್ಷಿಪ್ತ ಪರಿಚಯವನ್ನು ಮಾತ್ರ ಇಲ್ಲಿ ಮಾಡಿಕೊಡಲಾಗಿದೆ. ಅವರ ಬದುಕು-ಸಾಹಿತ್ಯದ ಬಗೆಗೆ ಆಗಬೇಕಾದ ಕೆಲಸ ಸಾಕಷ್ಟಿವೆ.

ಈ ಅವಕಾಶಕ್ಕಾಗಿ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಮತ್ತು ಕಾರ್ಯದರ್ಶಿಗಳಾದ ಡಾ. ಕಿಕ್ಕೇರಿ ಕೃಷ್ಣಮೂರ್ತಿ ಅವರಿಗೆ ಧನ್ಯವಾದಗಳು. ಹಾಗೆಯೇ ಟ್ರಸ್ಟ್‌ನ ಎಲ್ಲ ಸದಸ್ಯರಿಗೂ, ಪುಸ್ತಕ ವಿನ್ಯಾಸ ಮಾಡಿದ ಎಂ. ಆರ್. ಗುರುಪ್ರಸಾದ್ ಮತ್ತು ಮುದ್ರಿಸಿದ ಧರಣಿ ಪ್ರಿಂಟರ್ಸ್‌ನ ಹೂವಪ್ಪ ಮತ್ತು ಸಿಬ್ಬಂದಿ ವರ್ಗದವರಿಗೂ ಧನ್ಯವಾದಗಳು.

17-11-2018
ಗುಲಬರ್ಗಾ

ವಿಕ್ರಮ ವಿಸಾಜಿ

ಅನುಕ್ರಮ



ಚೆನ್ನವೀರ ಕಣವಿ

ಕ ವಿ ಕಾ ವ್ಯ ದ ರ್ಶ ನ

ಜೀವನ ಮೌಲ್ಯಗಳನ್ನು ಕಳೆದ ಏಳು ದಶಕಗಳಿಂದ ತಮ್ಮ ಕಾವ್ಯದಲ್ಲಿ ಗಂಭೀರವಾದ ಶೋಧನೆಗೆ ಒಳಪಡಿಸಿದವರು ಹಿರಿಯ ಕವಿ ಶ್ರೀ ಚೆನ್ನವೀರ ಕಣವಿ. ಕನ್ನಡ ಕಾವ್ಯದ ನೂರಾರು ತೊರೆಗಳಲ್ಲಿ ಒಂದು ತಿಳಿಜಲದ, ಆರೋಗ್ಯಪೂರ್ಣ, ಮಾನವೀಯ ಜಗತ್ತಿನ ವೈವಿಧ್ಯವನ್ನು ಕಾಣಿಸುವ ಕಾವ್ಯ ಇವರದು. ನೋವು, ಸಂಕಟಗಳ ತೆರೆ ಸರಿಸಿ ಹೊಸಬಾಳಿನ, ಹೊಸಕನಸಿನ ಹಾದಿಗಳ ಹುಡುಕಾಟವೆ ಇವರ ಕಾವ್ಯಕ್ಕೆ ಪ್ರಿಯವಾದ ಕೆಲಸ. ದೇಶದ ಬಿಡುಗಡೆಯ ಕನಸು, ನಾಡಿನ ಏಕೀಕರಣದ ಕನಸು, ಬಡವರ ಏಳಿಗೆಯ ಕನಸು, ಸಂಸ್ಕೃತಿ ಬಾಳುವೆಯ ಕನಸು – ಹೀಗೆ ಹತ್ತು ಹಲವು ಕನಸುಗಳನ್ನು ಕನ್ನಡಿಗರಿಗೆ ಕೊಟ್ಟ ಕಾವ್ಯವಿದು. ಇಂಥ ಕನಸುಗಳು ಕನ್ನಡ ಕಾವ್ಯ ಪರಂಪರೆಯ ಕಸುವಿಗೆ ಶಕ್ತಿ ತುಂಬಿವೆ. ಬದುಕಿನ ಧೀರ ನಡಿಗೆಯ ಚಲನೆ ಕಾಣಿಸಿವೆ. ಬಾಳುವುದೆಂದರೆ ಏನು? ತಾಳುವುದೆಂದರೆ ಏನು? ಕೊಡುವುದೆಂದರೆ ಏನು? ಕೊಂಬುದೆಂದರೆ ಏನು? ಮಾಗುವುದೆಂದರೆ ಏನು? ಇಂಥ ಹಲವು ಪ್ರಶ್ನೆಗಳ ಚಿಂತನಶೀಲ ಲೋಕ ತೆರೆದಿಟ್ಟಿದೆ. ನಿಸರ್ಗ, ಮನುಷ್ಯಲೋಕ ಸ್ವಲ್ಪಮಟ್ಟಿಗೆ ಅನುಭಾವದ ಸೆಳೆತ ಎಲ್ಲವನ್ನೂ ಒಳಗೊಳ್ಳುವ ಕಣವಿಯವರ ಕಾವ್ಯ ಪರಂಪರೆಯ ಕಾವ್ಯದ ತಿಳಿವಳಿಕೆ, ಭಾಷೆ, ಲಯಗಳಲ್ಲಿ ಬೇರು ಬಿಟ್ಟಿದೆ. ಹೊಸ ಕಾವ್ಯದ ತಿಳಿವಳಿಕೆಯಲ್ಲಿ ಮೈಪಡೆದು ಹೂ ಬಿಟ್ಟಿದೆ. ಹಲವು ಕಾವ್ಯ

ಮಾರ್ಗಗಳಿಂದ ಹೊಸ ಅರಿವು ಪಡೆದಿದೆ. ಕನ್ನಡ ಕಾವ್ಯದ ನಿಬಿಡಾರಣ್ಯದಲ್ಲಿ ತನ್ನದೇ ಕಂಪು ಸೂಸಿದೆ.

ಶ್ರೀ ಚೆನ್ನವೀರ ಕಣವಿಯವರು ಬರವಣಿಗೆ ಆರಂಭಿಸಿದ್ದು ಹದಿನೆಂಟು–ಹತ್ತೊಂಬತ್ತರ ತಾರುಣ್ಯದಲ್ಲಿ. ಅದಕ್ಕಿಂತ ಹಿಂದೆಯೇ ಅವರ ಬರವಣಿಗೆ ಆರಂಭವಾಗಿದ್ದರೂ ಕಾವ್ಯವಾಚನ, ಚರ್ಚೆ, ಪ್ರಕಟಣೆಗೆ ತೆರೆದುಕೊಂಡದ್ದು ತಾರುಣ್ಯದಲ್ಲಿ. ಅವರ ಮೊದಲ ಕವನ ಸಂಕಲನ 'ಕಾವ್ಯಾಕ್ಷಿ' ದ. ರಾ. ಬೇಂದ್ರೆಯವರ ಮುನ್ನುಡಿಯೊಂದಿಗೆ ಪ್ರಕಟವಾದದ್ದು 1949ರಲ್ಲಿ. ಅದು ನವೋದಯದ ದಟ್ಟ ಪ್ರಭಾವದ ಕಾಲ. ಕಣವಿಯವರ ಕಾವ್ಯವ್ಯಕ್ತಿತ್ವಕ್ಕೆ ಈ ವಾತಾವರಣ ಸಹಜವಾಗಿಯೆ ಪ್ರಿಯವಾಯಿತು.

ಮಮತೆಯಲ್ಲಿ ಮೂರ್ತಿಗೊಂಡ
ಸಮತೆಯಲ್ಲಿ ಸ್ಫೂರ್ತಿಗೊಂಡ
ದಿವ್ಯತೇಜದಲ್ಲಿ ತಾಯೆ, ಕಾವ್ಯ ಮೊಳೆಯಿತು

(ತಾಯೆ ನಿನ್ನ ಮಡಿಲೊಳು–ಕಾವ್ಯಾಕ್ಷಿ)

ನಾಡಿನ ಹೊಸ ವಾತಾವರಣ, ಹೊಸ ಆಶಯ ಕಾವ್ಯದ ವಾತಾವರಣದಲ್ಲಿ ಬಂದು ಕೂಡಿತು. ಪ್ರೀತಿ, ಕರುಣೆ, ಸಮಾನತೆ ಕವಿಯ ದನಿಗೆ ಬಂದು ಸೇರಿತು. ಕಾಲದ ಸದ್ದುಗಳನ್ನು ಕಣವಿಯವರ ಕಾವ್ಯ ಯಾವಾಗಲೂ ಗ್ರಹಿಸಿದೆ. ಅದರ ಅಗತ್ಯ ಮತ್ತು ಬದಲಾವಣೆಗಳನ್ನು ನಿರುದ್ವಿಗ್ನವಾಗಿ ನಿರೂಪಿಸಿದೆ. ನಾಡನ್ನು ಕಟ್ಟುವ, ಸಂಬಂಧಗಳನ್ನು ಬೆಸೆಯುವ ಹಾಡುಗಳ ಕಟ್ಟೋಣವೆ ಕವಿಯ ಕಾವ್ಯದ ನಿಲುವಾಗಿದೆ. ಮನಸ್ಸನ್ನು ನೋಯಿಸುವ ಕೆಟ್ಟ ಆಲೋಚನೆಗಳಿಂದ ದೂರ ನಿಲ್ಲುವ ಶಪಥವನ್ನೂ ಕಾವ್ಯ ತೊಟ್ಟಿದೆ.

ಅಲ್ಲ ಸಲ್ಲದ ವಿಷಮ ವಿಪರೀತ ಭಾವನೆಯ
ವಿಷಗಾಳಿ ಎನ್ನ ಬಳಿ ಸುಳಿಯದಿರಲಿ
ಸೊಲ್ಲು ಸೊಲ್ಲಿಗೆ ಪರರನಣಕಿಸುವ ಕೆಣಕಿಸುವ
ಅಶಿವ ನುಡಿ ಎನ್ನ ಕಿವಿ ಸೇರದಿರಲಿ

(ಬಿನ್ನಹ : ಕಾವ್ಯಾಕ್ಷಿ)

ಕೆಡಕನ್ನು ಮೆಟ್ಟಿ ನಿಲ್ಲುವ ದಾರಿಗಳಲ್ಲಿ ಇದೂ ಒಂದು. ಆಗತಾನೇ ರೂಪುಗೊಳ್ಳುತ್ತಿದ್ದ ತರುಣ ಕಾವ್ಯದ ಮನಸ್ಸು ಕೇಳಲು ಕಾಣಲು ಬರೆಯಲು ಹಂಬಲಿಸಿದ್ದು ಬದುಕಿನ ಒಳಿತನ್ನು. ಇದರರ್ಥ– ಇದಕ್ಕೆ ಕಷ್ಟ–ಬಡತನ, ಅವಮಾನ ಗೊತ್ತಿಲ್ಲವೆಂದಲ್ಲ. ಆದರೆ, ಇವುಗಳನ್ನು ಮೀರುವ, ಎಲ್ಲ ಸಣ್ಣತನಗಳಾಚೆ ಕಣ್ಣಹಾಯಿಸುವ ತುಡಿತವೊಂದು ಸದಾ ಮುನ್ನೆಲೆಯಲ್ಲಿದೆ. ತಮ್ಮ ಆರಂಭದ ಪದ್ಯಗಳಲ್ಲೇ ಮನುಷ್ಯನ ಮಾಗುವಿಕೆಯ ಸ್ತರಗಳನ್ನು ಕಾವ್ಯ ಮೀಟಲೆತ್ನಿಸಿದೆ.

ಕಣವಿಯವರು ಬರೆಯಲಾರಂಭಿಸಿದಾಗ ಕುವೆಂಪು, ದ. ರಾ. ಬೇಂದ್ರೆ ಮತ್ತು ಮಧುರಚೆನ್ನರು ತಮ್ಮ ಕಾವ್ಯೋದ್ಯೋಗದಿಂದ ಹೆಸರುವಾಸಿಯಾಗಿದ್ದರು. ಇಂಥ

ದಿಗ್ಗಜರ ಮಾದರಿಯೆದುರು ಹೊಸ ಕವಿಗೆ ಹೊಸ ಸವಾಲುಗಳಿರುತ್ತವೆ. ಕಣವಿಯವರು ಇದನ್ನು ಸಮರ್ಥವಾಗಿ ಎದುರಿಸಿದರು. ಷಟ್ಪದಿ, ಸಾಂಗತ್ಯ, ತ್ರಿಪದಿ, ರಗಳೆ, ವಚನಗಳ ಲಯಗಳಿಂದ ಭಾವಜಗತ್ತನ್ನು ಅನಾವರಣಗೊಳಿಸಿದರು. ಕನ್ನಡ ಭಾವಗೀತೆಯ ಹೊಸ ದಾರಿಗಳನ್ನು ತೆರೆದಿಟ್ಟರು. ಮುಗ್ಧತೆ, ಅಂತಃಕರಣ, ಆರ್ದ್ರತೆ ಇವರ ಭಾವಗೀತೆಗಳ ಮುಖ್ಯ ಗುಣಗಳು. ಶಾಂತರಸವನ್ನು ಹಲವಂದದಲ್ಲಿ ತಮ್ಮ ಭಾವಗೀತೆಗಳೊಳಗೆ ತಂದರು. ಬಹುಶಃ ಕಣವಿಯವರ ಹಾಗೆ ಶಾಂತರಸದ ಹಲವು ಮುಖಗಳನ್ನು ಕನ್ನಡ ಭಾವಗೀತೆಯಲ್ಲಿ ತಂದವರು ಕಡಿಮೆ. ಮಾಯಾ ಕೋಲಾಹಲದ ನಡುವೆ ಬಯಲಲ್ಲಿ ಬಯಲಾಗಿ ನಿಂತ ಅಲ್ಲಮನ ಕುರಿತು ಬರೆದ ಅವರ ಕವಿತೆಯನ್ನು ಗಮನಿಸಬೇಕು. ಇದೂ ಶಾಂತರಸದ ಇನ್ನೊಂದು ರೂಪವೆ. ತಂಗಿಯ ಮನಃಸ್ಥಿತಿ ಕುರಿತ ಕವಿತೆ ಕೂಡ ಇದೇ ದಾರಿಯದ್ದು; ಚಂದ್ರೋದಯ, ಸೂರ್ಯೋದಯಗಳೂ ಶಾಂತಿಗಾಗಿ ಹಂಬಲಿಸಿದ ನಿಸರ್ಗದ ಬಯಕೆಗಳು. ಕನ್ನಡ ಕಾವ್ಯ ಹಲವು ರಸಗಳ ತೊಟ್ಟಿಲು— ಅದರಲ್ಲಿ ಶಾಂತರಸದ ತೊಟ್ಟಿಲನ್ನು ಸಮರ್ಥವಾಗಿ ತೂಗಿದ ಕೈ ಕಣವಿಯವರದು.

ಬೈಗುಗೆಂಪಿನ ಬಣ್ಣ ಕಡಲಾಳ ತಳದಿಂದ
ಬುರುಬುರನೆ ಮೇಲೆದ್ದ ಗುಳ್ಳೆಯಂತೆ
ತಂಗದಿರನುದಯಿಸಿದ, ಶಾಂತಿಮತಿ ಬಿಂಬಿಸಿದ
ತಪಗೊಂಡ ಮೌನವ್ರತಧಾರಿಯಂತೆ.

(ಚಂದ್ರೋದಯ : ಕಾವ್ಯಾಕ್ಷಿ)

ಚಂದ್ರನ ಚಲನೆ, ಬೆಳಕು, ಹುಟ್ಟು ಎಲ್ಲವೂ ಶಾಂತಿಯನರಸುವ ರೀತಿಯಂತೆ ಕಾಣುತ್ತಿದೆ. ಚಂದ್ರನೇ ಒಬ್ಬ ಸಂತನಂತೆ ಅಲೆಯುತ್ತಿದ್ದಾನೆ. ಅವಸರ, ಅಪಸ್ವರಗಳನ್ನು ದಾಟಿ ಮನಸ್ಸು ತನ್ನ ಉದ್ವೇಗವನ್ನು ಕಳೆದುಕೊಂಡು ಸುಂದರ, ಅನುದ್ದೇಶಿತ ಭಾವದ ಬೆಳಕನ್ನಷ್ಟೆ ಹಂಬಲಿಸಿದೆ. ಕಣವಿಯವರ ಕಾವ್ಯವನ್ನು ಅವರದೇ ಸಾಲಿನಲ್ಲಿ ಹೇಳುವುದಾದರೆ ಅದು 'ಹೊಂಗನಸು ಹೂತಿರುವ ಭರಣಿಯಂತೆ'. ಆ ಹೊಂಗನಸು ಶಾಂತಿ, ದಯೆ, ಕರುಣೆಗಳಿಂದ ಕೂಡಿದೆ. ಅವರ ಇನ್ನೊಂದು ಕವಿತೆಯನ್ನು ಗಮನಿಸಿ. ಇದು ಅವರ ಒಟ್ಟು ಕಾವ್ಯ ಮನೋಧರ್ಮವನ್ನೇ ಹೇಳುವಂತಿದೆ:

ಗಂಭೀರ ಗಿರಿಯೆದುರು ಬಿರುಗಾಳಿ ಗುಲ್ಲು
ತುಂಬಿದಂಬರದಲ್ಲು ಶಾಂತಮಯ ಸೊಲ್ಲು
ಮೌನ–ಗಾನ–ಧ್ಯಾನ–ತವಸಿಯತಾಗು
ಬಾಳಿನುಯ್ಯಾಲೆಯನು ತಾಳ್ಮೆಯಲಿ ತೂಗು

(ತಾಳ್ಮೆ : ಕಾವ್ಯಾಕ್ಷಿ)

ಕಣವಿ ಅವರ ಈ ಕಾವ್ಯ ಮನೋಧರ್ಮವೇ ಜೀವನ ಮನೋಧರ್ಮವೂ ಕೂಡ ಹೌದು. 'ಬಾಳಿನುಯ್ಯಾಲೆ' ಎಂಬ ಪದವನ್ನು ಗಮನಿಸಬೇಕು. ಅದು ಸ್ಥಿರವಾದುದಲ್ಲ. ನಿರಂತರ ಏರಿಳಿತಗಳಿಂದ ಕೂಡಿರುವಂಥದ್ದು. ಇಂಥ ಉಯ್ಯಾಲೆಯನ್ನು

ತಾಳ್ಮೆಯಿಂದ ತೂಗುವುದರಲ್ಲೇ ಬಾಳಿನ ಗೆಲುವಿದೆ. ಹಾಗೆಂದು ಕಣವಿಯವರ ಕಾವ್ಯಕ್ಕೆ ಇಲ್ಲಿನ ಕೊಳಚೆ-ಕಗ್ಗತ್ತಲು ಗೊತ್ತಿಲ್ಲವೆಂದಲ್ಲ. ಮನುಷ್ಯರು ಪರಸ್ಪರ ನೋವಿಗೊಳಪಡಿಸಿಕೊಳ್ಳುವ ಅಮಾನವೀಯ ಚರಿತ್ರೆಯನ್ನೂ ಹಲವಾರು ಕವಿತೆಗಳು ಕಟ್ಟಿಕೊಟ್ಟಿವೆ. 'ಹೋರು ಬೀಳ್ವನ್ನೆಗಂ' ಕವಿತೆ ನರರು-ನರರನ್ನು ಪರಸ್ಪರ ಇರಿಯುವ ವಿಕೃತ ಹಗೆಯ ಚಿತ್ರಣವಿದೆ. ಜಾತಿಮತ ಪಂಥಗಳ ಕೊಳಚೆಯಲಿ ಕಚ್ಚಾಡುವ ಕುರಿತು ಬೇಸರವಿದೆ. ಸಹೋದರತ್ವ, ಮಾನವತ್ವ ಮರೆತ ಮನುಷ್ಯನ ಸಣ್ಣತನ ಕುರಿತ ವಿಷಾದವಿದೆ. ಇದೆಲ್ಲದರಿಂದ ಬಿಡುಗಡೆಗೊಳ್ಳುವ ತವಕದಲ್ಲಿ ಕವಿತೆಯಿದೆ. ನಲುಮೆ, ನೆಮ್ಮದಿ, ಸ್ನೇಹ, ಸೌಹಾರ್ದ, ವಿಶ್ವಬಂಧುತ್ವಗಳೇ ಬದುಕನ್ನು ಉಳಿಸುವ ನಂಬಿಕೆಯೊಂದಿಗೆ ಕವಿತೆ ಮುಕ್ತಾಯಗೊಂಡಿದೆ. 'ರಕ್ತಾಕ್ಷಿ' ಕವಿತೆಯೂ ಸಮಾಜದ ಕ್ರೌರ್ಯಪೂರ್ಣ ಚಲನೆ ಕಂಡು ಪ್ರತಿಭಿಟಿಸಿದೆ;

ಶಾಂತಿಪ್ರಿಯರೆ, ಸಂಭಾವಿತರೆ, ಸಹಿಷ್ಣುತಾ
ವಾದಿಗಳೆ: ಹಾದಿಬೀದಿಗಳೆ ಹೇಳುತ್ತಿವೆ
ಒಡೆದ ದೀಪಗಳ, ಮೈ ಸುಟ್ಟ ವಾಹನಗಳ, ಆಸ್ಪತ್ರೆಗೆ
ದಾಖಲಾದ ಮುಗ್ಧರ, ವಿದಗ್ಧರ ವ್ಯಥೆಯ.

(ರಕ್ತಾಕ್ಷಿ : ಕಾರ್ತಿಕದ ಮೋಡ)

ರಾಮಮನೋಹರ ಲೋಹಿಯಾ ಅವರದೊಂದು ಮಾತಿದೆ; ಇಲ್ಲಿನ ದುಃಖವನ್ನು ಕಂಡು ಕಣ್ಣೀರು ಸುರಿಸುವಂತೆ ಶೋಷಣೆ ಕಂಡು ಕ್ರೋಧವನ್ನೂ ಹೊರಹೊಮ್ಮಿಸ ಬೇಕು ಎಂಬುದು ಆ ಮಾತು. ಇದನ್ನು ಕಣವಿಯವರ ಕಾವ್ಯ ತನ್ನದೇ ಚೌಕಟ್ಟಿನಲ್ಲಿ ಅಭಿವ್ಯಕ್ತಿಸಿದೆ.

ಬಂದಿರುವ ಬರಲಿರುವ ಸಂಕಷ್ಟವೆಣಿಸುವರೆ?
ನುರಿವೋಗು ಸ್ಥಿರವಾಗು ಸವ್ಯಸಾಚಿ!
ಅಳ್ಳಿರಿವ ಕೊಳ್ಳಿದೆವ್ವಗಳೆಂದು ಅಂಜುವರೆ
ನಿನ್ನಾತ್ಮ ಕೆಚ್ಚಿನೆದುರಾವ ಭೀತಿ?

(ಭಾವಜೀವಿ : ಭಾವಜೀವಿ)

ಎಲ್ಲವನ್ನೂ ಎದುರಿಸುವ ಆತ್ಮಸ್ಥೈರ್ಯವೇ ಈಗ ಮನುಷ್ಯನಿಗೆ ಉಳಿದಿರುವ ದಾರಿ. ಇಂಥ ಆತ್ಮಸ್ಥೈರ್ಯದಿಂದಲೇ ಜೀವನದ ಜಂಜಾಟಗಳನ್ನು ಗೆಲ್ಲಬೇಕೆಂದು ಕಾವ್ಯ ನಂಬಿದೆ. ಇಂಥ ನಂಬಿಕೆಯ ಹಾದಿಯೇ ಬಹುತೇಕ ಕವಿತೆಗಳ ತಳಹದಿಯಾಗಿದೆ. ಕಣವಿಯವರ ಕಾವ್ಯ ಹೊರಗಿನ ವಿಕೃತಿಗಳಿಗೆ ಮನಸ್ಸಿನೊಳಗೆ ಔಷಧಿ ಹುಡುಕಿದ್ದೇ ಹೆಚ್ಚು. ಸಾಮಾಜಿಕ ಅಸಮಾನತೆಗೂ ಮನಸ್ಸಿನ ಅಪಕ್ವತೆಯೇ ಕಾರಣವೆಂದು ನಂಬಿದೆ. ಆ ಮನಸ್ಸಿನ ಪಕ್ವತೆಯಲ್ಲೇ ಎಲ್ಲ ಸಣ್ಣತನಗಳಿಗೂ ಮುಲಾಮು ಹುಡುಕಿದೆ. ಈ ಮೂಲಕ ಮನುಷ್ಯನ ವಿಕಾಸದ ಸಾಧ್ಯತೆಯೆಡೆಗೂ ಕಾವ್ಯ ಮನೆಮಾಡಿದೆ. ಜೀವನವೆಂದರೆ ಇದೇ ತಾನೆ? ಮನುಷ್ಯನ ವಿಕಾಸದ ಸಾಧ್ಯತೆಗಳನ್ನು ಅರಿಯುವುದು ಮತ್ತು

ಜೋಪಾನವಾಗಿ ಅವುಗಳನ್ನು ಪೋಷಿಸುವುದು. ಬಾಹ್ಯ ಅಗತ್ಯ ಮತ್ತು ಆಂತರಿಕ ಅಗತ್ಯಗಳನ್ನು ಕಾವ್ಯ ಮೇಳೈಸಿ ಹಾಡಿದೆ. ಕಣವಿಯವರ ಬರವಣಿಗೆಯ ಹೊಸ ಬಗೆಯಿದು.

ಇವೆಲ್ಲವನ್ನೂ ಗಮನಿಸುತ್ತಿದ್ದರೆ ಕಣವಿಯವರ ಕಾವ್ಯ ವೈಶಿಷ್ಟ್ಯಗಳ ಪರಿಚಯ-ವಾಗುವುದು. ಆದರ್ಶ, ಕನಸುಗಾರಿಕೆ, ಮೌಲ್ಯಗಳ ಶೋಧ, ಸಂಬಂಧಗಳ ಕಾಪಿಡುವಿಕೆ, ಸ್ಥಳೀಯ ಪ್ರಜ್ಞೆ, ನಿಸರ್ಗ ಪ್ರೀತಿ ಹಾಗೂ ಶ್ರದ್ಧೆಯನ್ನು ಬಿಡದಿರುವುದು. ಇವುಗಳ ಸುತ್ತವೇ ಕವಿತೆಯ ಸ್ತರಗಳು ಬೆಳೆದಿವೆ. ವಸ್ತುವೈವಿಧ್ಯದ ದೃಷ್ಟಿಯಿಂದಲೂ ಇಲ್ಲಿನ ಕಾವ್ಯದ ಹರವು ದೊಡ್ಡದು. ಮಗಳು, ಮಡದಿ, ತಾಯಿ, ತನ್ನನ್ನು ಪ್ರಭಾವಿಸಿದ ವ್ಯಕ್ತಿಗಳು, ಸಮಾಜ, ನಿಸರ್ಗ, ಪಕ್ಷಿಗಳ ಕಲರವ, ಸಂಸ್ಕೃತಿ ಎಲ್ಲವುಗಳನ್ನು ಕಾವ್ಯವಾಗಿಸುವ ಮನಸ್ಸಿದು. ಅಲ್ಲಿನ ಬಾಳ್ವೆಯ ಬೆಳಕನ್ನೇ ಕವಿತೆಗಳು ಧ್ಯಾನಿಸಿವೆ. ನವೋದಯ ಕಾವ್ಯ ಮನೋಧರ್ಮದ ಒಂದು ಸಾರ್ವತ್ರಿಕ ಗುಣವಿದು; ಜೀವಜಾಲದ ಹಲವು ವಲಯಗಳನ್ನು ತನ್ನೊಳಗೆ ಸ್ವೀಕರಿಸುವುದು. ಭಕ್ತಿ ಮತ್ತು ಶ್ರದ್ಧೆಯಿಂದ ಇವುಗಳನ್ನು ನಿರೀಕ್ಷಿಸುವುದು.

ಕಣವಿಯವರ ಕಾವ್ಯದ ಒಂದು ದೊಡ್ಡ ಭಾಗವೆಂದರೆ ವ್ಯಕ್ತಿಗೀತೆಗಳು. ಬಹುಶಃ ಕನ್ನಡದಲ್ಲಿ ಕಣವಿಯವರಷ್ಟು ವ್ಯಕ್ತಿಗೀತೆಗಳನ್ನು ಬೇರಾರೂ ಬರೆದಿರಲಿಕ್ಕಿಲ್ಲ. ನೀಲಾಂಬಿಕೆ, ಬಸವಣ್ಣ, ಅಕ್ಕ, ಗಾಂಧಿ, ಅಂಬೇಡ್ಕರ್, ಹಳಕಟ್ಟಿ, ಕುವೆಂಪು, ಬೇಂದ್ರೆ, ಪುತಿನ, ಜಿಎಸ್‌ಎಸ್, ಲಂಕೇಶ್ ಆದಿಯಾಗಿ ಹಲವರ ವ್ಯಕ್ತಿತ್ವ ಸುನೀತಗಳಲ್ಲೋ ಅಥವಾ ಕವಿತೆಗಳಲ್ಲೋ ಕಲಾತ್ಮಕವಾಗಿ ಬಿಚ್ಚಿಕೊಂಡಿದೆ.

ವ್ಯಕ್ತಿತ್ವದ ಹಲವು ಆಯಾಮಗಳನ್ನು ಸೂಕ್ಷ್ಮವಾಗಿ ಹಿಡಿಯುವ ಈ ಕಸುಬುಗಾರಿಕೆ ಕನ್ನಡದಲ್ಲಿ ಅನನ್ಯವಾದದ್ದು. ಬೇಂದ್ರೆಯವರ ಕುರಿತ ಇಷ್ಟು ಧೀಮಂತ ಕವಿತೆ ಕನ್ನಡದಲ್ಲಿ ನಾನಂತೂ ಓದಿಲ್ಲ:

ಕಣ್ಣ ಮಿಂಚಿಸಿ, ನೂರು ಹಂಚಿಕೆಯ ಸಂಚಿಕೆಯ
ತುಂಬಿ-ತಲೆಯಾಡಿಸುತ, ಯಾವುದೋ ಒಳದನಿಗೆ
ನಾದ ಕೂಡಿಸಿ, ನೆಲಕೆ ನೀರು ಬರಿಸುವ ಹಾಗೆ
ಬೀಸುಗಾಳಿಯ ಜೊತೆಗೆ ಬಂದರದೊ ಬೇಂದ್ರೆ! ಕೈಯ
ಮಾಟಕ್ಕೆ ಮಾತು ಮಾಂತ್ರಿಕನಾಟ: ಅರಗಳಿಗೆ-
ಹೊರ ಒಳಗೆ ತುಂಬಿ ತುಳುಕುವ ಬೆಡಗು. ಕಡಲ ಗುಟು-
ಕರಿಸಿ, ಚಿಕ್ಕೆಗಳ ಮುಕ್ಕಳಿಸುವರು; ತಟ್ಟನೆ ಒಗಟು
ಒಡೆಯುವ ಒಡಪು-ನುಡಿ: ಕುಡಿಮಿಂಚು ಬಾನ ಗುಡಿಗೆ.

ಇಪ್ಪತ್ತೊ? ಎಪ್ಪತ್ತೊ? ಮುಪ್ಪತ್ತು ಮುಂದೆ ನಡೆ;
ಅಂಬಿಕಾತನಯನಿಗೆ ದತ್ತು ಕೊಟ್ಟಂದು ಇವ-

ರೊಪ್ಪತ್ತು. ಜಗದಂಬೆ-ಹಡಲಿಗೆ ಹೊತ್ತು ಕುಣಿವ-
ಗೆಲ್ಲಿ ಪುರುಸೊತ್ತು? ಹಣ್ಣಾದ ಕೇದಿಗೆಯ ಹೊಡೆ:
ಚೂಪಾದ ಗರಿ: ಹುಷಾರಿ: ಕಂಪಿಗೆಲ್ಲಿಯ ಕೊರತೆ?
ನಡೆದದ್ದೆ ಸಾಧನಕೇರಿ, ನುಡಿದದ್ದೆ ಕವಿತೆ.

(ಎಪ್ಪತ್ತರ ಬೇಂದ್ರೆ-ಎರಡು ದಡ)

ಬೇಂದ್ರೆಯವರ ಕಾವ್ಯ ರಚನೆಯ ವಿಧಾನವನ್ನು ಮೇಲಿನ ಕವಿತೆ ಶಕ್ತಿಯುತವಾಗಿ ಹಿಡಿದಿದೆ. ಒಳದನಿಗೆ ನಾದ ಕೂಡಿಸುವ ಅಥವಾ ಹುಡುಕುವ ನಿರಂತರ ಕ್ರಿಯೆಯೆ ಬೆಂದ್ರೆಯವರ ಕಾವ್ಯದ ಪಯಣವಾಗಿತ್ತು. ಬೇಂದ್ರೆಯವರ ನಾದಗುಣ ಮತ್ತು ದರ್ಶನ ಗುಣ ಅಪರಿಚಿತವೇನಲ್ಲ. ನೆಲಕೆ ನೀರು ಬರಿಸುವ ಹಾಗೆ – ಬೇಂದ್ರೆಯವರ ಕಾವ್ಯದ ಒರತೆ, ಅಂತಃಕರಣದ ಜಲ, ಜೀವಂತಿಕೆ ಉಕ್ಕಿಸುವ ರೀತಿಗೆ ಸಮರ್ಥ ಸೂಚಕ. ಮುಂದಿನ ಸಾಲುಗಳು ಬೇಂದ್ರೆಯವರ ಕಾವ್ಯದ ಮಾಂತ್ರಿಕತೆ, ಬೆಡಗನ್ನು ಚಿತ್ರಿಸಿದೆ. ಅವರ ಕಾವ್ಯದ ಅಗಾಧ ಕಲ್ಪನಾಶಕ್ತಿ ಕಣವಿಯವರ ಅಗಾಧ ಕಲ್ಪನೆಯಲ್ಲಿ ರೇಖಿಸಲ್ಪಟ್ಟಿದೆ; 'ಕಡಲ ಗುಟುಕರಿಸಿ ಚಿಕ್ಕೆಗಳ ಮುಕ್ಕಳಿಸುವರು'. ಎಲ್ಲಿಂದೆಲ್ಲಿಗೋ ಜಿಗಿಯುವ, ಸ್ವರ್ಗ-ನರಕಗಳನ್ನು ತಾಕುವ, ಯುಗಯುಗಗಳನ್ನು ಸಂಧಿಸುವ ಬೇಂದ್ರೆಯವರ ಕಾವ್ಯ ಗುಣಕ್ಕೆ ಇದಕ್ಕಿಂತ ಸೂಕ್ತ ನಿದರ್ಶನ ಇನ್ನೊಂದಿರಲಾರದು. ಅಂಬಿಕಾತನಯರ ವಯಸ್ಸು, ಅವರ ಕಾವ್ಯದ ವಯಸ್ಸು ಊಹೆಗೆ ನಿಲುಕಲಾರದ್ದು. ಅದರ ಲೆಕ್ಕ ಹಾಕುತ್ತ ಕೂಡುವುದರಲ್ಲಿ ಅರ್ಥವಿಲ್ಲ. ಬೇಂದ್ರೆಯವರಿಗೂ ಅದರ ಖಬರಿಲ್ಲ. 'ಜಗದಂಬೆ ಹಡಲಿಗೆ ಹೊತ್ತು ಕುಣಿವ ಅವರಿಗೆ ಇದಕ್ಕೆಲ್ಲ ಪುರುಸೊತ್ತು ಎಲ್ಲಿದೆ?' ಅವರ ಕಾವ್ಯವ್ಯಕ್ತಿತ್ವ ತಾನು ನಡೆದದ್ದನ್ನೆಲ್ಲ ಸಾಧನಕೇರಿ ಮಾಡುತ್ತದೆ ಮತ್ತು ನುಡಿದುದನ್ನೆಲ್ಲ ಕಾವ್ಯವಾಗಿಸುತ್ತದೆ... ಹೀಗೆ ವ್ಯಕ್ತಿತ್ವದ ಸೂಕ್ಷ್ಮ ಗ್ರಹಿಕೆ ಕಣವಿಯವರ ಇನ್ನೂ ಹಲವು ಕವಿತೆಗಳಲ್ಲಿವೆ. ಲಂಕೇಶ್ ಕುರಿತು ಬರೆದಿರುವ 'ನೀಲುವಿಗೊಂದು ಶಾಲು' ಕವಿತೆ ಕೂಡ ತನ್ನ ಚುರುಕಾದ ನೋಟದಿಂದ ಗಮನಸೆಳೆಯುತ್ತದೆ.

ಕನ್ನಡದಲ್ಲಿ ಬಂದ ಸುನೀತಗಳಲ್ಲೂ ಕಣವಿಯವರದೇ ಮೇಲುಗೈ. ಸುನೀತದ ಆಕೃತಿಯನ್ನು ಬಳಸಿಕೊಂಡ ಬಗೆ ಕಣವಿಯವರ ಕಾವ್ಯಶಿಸ್ತಿಗೆ ಒಂದು ಶ್ರೇಷ್ಠ ನಿದರ್ಶನ. ಬೇರೆ ಭಾಷೆಗಳಿಂದ ಬಂದ ಛಂದೋರೂಪಗಳು ಕೆಲವೊಮ್ಮೆ ಕನ್ನಡದಲ್ಲಿ ಸಪ್ಪೆ ಎನಿಸುತ್ತವೆ. ಆದರೆ, ಕಣವಿಯವರಲ್ಲಿ ಮಾತ್ರ ಹಾಗಾಗುವುದಿಲ್ಲ. ಅವು ಕನ್ನಡದ ಮಣ್ಣಿನ ದೀಕ್ಷೆ ಪಡೆದು ಸಹಜವಾಗಿ ಅರಳಿಕೊಂಡಿವೆ. ಶಾಸ್ತ್ರೀಯ ಸಂಗೀತಗಾರರು ರಾಗವೊಂದನ್ನು 'ಆತ್ಮಸಾತ್' ಮಾಡಿಕೊಳ್ಳುವಂತೆ ಕಣವಿಯವರು 'ಸುನೀತ' ಕಾವ್ಯಪದ್ಧತಿಯನ್ನು 'ಆತ್ಮಸಾತ್' ಮಾಡಿಕೊಂಡಿದ್ದಾರೆ. ಹೀಗಾಗಿ ಸ್ವೀಕರಣದ ಎಲ್ಲ ಕೃತಕತೆ ಮೀರಿ ಇವು ಹೊಳೆದಿವೆ ಮತ್ತು ಬೆಳೆದಿವೆ. ಕುಶಲ ಶಿಲ್ಪಿಯಂತೆ, ಸಂಗೀತಗಾರನಂತೆ ಕಣವಿಯವರು 'ಸುನೀತ'ವನ್ನು ಸಾಣೆ ಹಿಡಿದಿದ್ದಾರೆ.

ಸುನೀತಗಳು ಶ್ರೀ ಚೆನ್ನವೀರ ಕಣವಿಯವರ ಇಷ್ಟಾರ್ಥಸಿದ್ಧಿಗಳು. ಈ ಮೊದಲೇ ಹೇಳಿದ ಹಾಗೆ ಅವರಂತೆ ಕನ್ನಡದಲ್ಲಿ ತಮ್ಮ ಭಾವಕ್ಕೆ ಸುನೀತಗಳನ್ನು ದಕ್ಕಿಸಿಕೊಂಡವರು ಕಡಿಮೆ. ಕಳೆದ ಆರು ದಶಕಗಳಿಂದ ಅವರ ಕಾವ್ಯಜೀವನದ ಅವಿಭಾಜ್ಯ ಅಂಗವಾಗಿ ಸುನೀತವು ಮುಂದುವರಿದಿದೆ, ಇದು ಅಚ್ಚರಿ ಮತ್ತು ಅಪರೂಪದ ಸಂಗತಿ. ಈ ಮೂಲಕ ಕನ್ನಡಕ್ಕೆ ಹೊಸ ಶೈಲಿಯೊಂದು ಒದಗಿಸಿದ್ದಾರೆ. ಒಂದು ಭಾಷೆಗೂ ಆ ಭಾಷೆಯಲ್ಲಿ ಹುಟ್ಟಿಕೊಂಡಿರುವ ಛಂದಸ್ಸಿಗೂ ಗಾಢವಾದ ನಂಟಿರುತ್ತದೆ. ಆದರೆ, ಯಾವುದೇ ಛಂದಸ್ಸು ಇನ್ನೊಂದು ಭಾಷೆಗೆ ಚಲಿಸಿ ಹೊಸ ಲಕ್ಷಣಗಳನ್ನು ಮೈಗೂಡಿಸಿಕೊಳ್ಳುತ್ತದೆ. ಅಷ್ಟೇ ಯಾಕೆ– ಒಂದೇ ಭಾಷೆಯ ವಿವಿಧ ಕವಿಗಳಲ್ಲೂ ಅದು ಬಗೆಬಗೆಯಾಗಿ ಅರಳುವುದುಂಟು. ಅಂದರೆ, ಛಂದಸ್ಸಿಗಿರುವ ಈ ಫ್ಲೆಕ್ಸಿಬಲ್ ಗುಣವನ್ನು ಮರೆಯದೆ ವಿವಿಧ ಭಾಷೆಗಳಲ್ಲಿ ಅದು ಮೂಡಿನಿಂತ ಕ್ರಮವನ್ನು ಅರಿಯಬೇಕಾಗಿದೆ. ಇಲ್ಲವಾದರೆ ಸಾನೆಟ್ ನಮ್ಮದಲ್ಲ ಎನ್ನುವ ಸಂಗತಿಯೇ ಮುಖ್ಯವಾಗಿ, ಸಾನೆಟ್ ಹೇಗೆ ನಮ್ಮದಾಯಿತು ಎನ್ನುವ ಸಂಗತಿ ಹಿಂದೆ ಸರಿಯುತ್ತದೆ. ಈ ಎರಡನೆಯದನ್ನು ಪರಿಶೀಲಿಸುವ ಅನಿವಾರ್ಯತೆಯನ್ನು ಕಣವಿಯವರ ಸುನೀತಗಳು ಉಂಟುಮಾಡಿದ್ದು ಒಂದು ಸಾಧನೆಯೇ ಸರಿ. ನಮ್ಮದಲ್ಲದ ಛಂದಸ್ಸನ್ನು ನಾವು ಬಳಸಬಾರದೆಂದರೆ ಕೆಲಮಟ್ಟಿಗೆ ನಮ್ಮ ಕಾವ್ಯ ಭಾಷೆ ಬಡವಾಯಿತೆಂದೇ ಅರ್ಥ. ಉದ್ದಕ್ಕೂ ಕನ್ನಡಕಾವ್ಯ ಬೇರೆ ಬೇರೆ ಭಾಷೆಗಳ ಛಂದಸ್ಸುಗಳೊಂದಿಗೆ ಒಡನಾಟವಿಟ್ಟುಕೊಂಡು ಬೆಳೆದು ಬಂದ ಚರಿತ್ರೆ ನಮ್ಮ ಕಣ್ಣೆದುರಿಗಿದೆ. ಇದನ್ನೆಲ್ಲ ತಾಳ್ಮೆಯಿಂದ ಅರಿತು ಕನ್ನಡ ಕಾವ್ಯದ ಯಶಸ್ಸನ್ನು ಪರಿಶೀಲಿಸಬೇಕಾಗಿದೆಯೇನೋ!

ಕಣವಿಯವರ ಸುನೀತಗಳಲ್ಲಿ ಜೀವನ ಪ್ರೀತಿಯ ಕ್ಷಣಗಳಿವೆ. ವ್ಯಕ್ತಿ, ನಿಸರ್ಗ, ಘಟನೆ ಇಂಥ ಕ್ಷಣಗಳನ್ನು ಕಾಣಿಸಲು ಮೂಲ ಬಿಂದುಗಳಾಗಿ ಒದಗಿವೆ.

ನನ್ನೆದುರು ಅವರ 'ಕಾಣಿಕೆ' ಎಂಬ ಸುನೀತವಿದೆ. ನಿಸರ್ಗ ಮತ್ತು ಜೀವನದ ತಾತ್ವಿಕತೆಯನ್ನು ಇದರಲ್ಲಿ ಕವಿ ಶೋಧಿಸುತ್ತಿದ್ದಾರೆ. ಈ ಶೋಧನೆ ಮೇಲಿನೆರಡರ ಕ್ರಿಯೆಯನ್ನನುಸರಿಸಿ ನಡೆದಿದೆ. ಒಂದರಲ್ಲಿ ಕ್ರಿಯೆ ಸಹಜವೆನ್ನುವಂತೆ ಕಾಣುತ್ತಿದ್ದರೆ, ಇನ್ನೊಂದರಲ್ಲಿ ನಡೆಸಬೇಕಾದದ್ದು, ಪ್ರಯತ್ನಪೂರ್ವಕವಾದದ್ದು ಎಂಬರ್ಥವನ್ನು ತೋರುತ್ತಿದೆ. ಕಣವಿಯವರು ವ್ಯಕ್ತಿಗಳ ಕುರಿತು ಬರೆದ ಸುನೀತಗಳನ್ನು ಗಮನಿಸಬೇಕು, ಅವರೆಲ್ಲ ಅಪಾರ ಪರಿಶ್ರಮದಿಂದ ಬದುಕನ್ನು ಮಾಗಿಸಿಕೊಂಡವರು. ಮನುಷ್ಯನ ಪ್ರಯತ್ನಶೀಲತೆಯನ್ನು ಯಾವಾಗಲೂ ಒಂದು ಆದರ್ಶವನ್ನಾಗಿ ಕಣವಿಯವರ ಕಾವ್ಯ ನಂಬಿದೆ. ಅಂಥ ನಂಬಿಕೆ ಇಲ್ಲೂ ಮುಂದುವರೆದಿದೆ. ಕಾಲ ಉರುಳುತ್ತಿದೆ, ಚಿಕ್ಕೆಗಳು ಬೆಳಕು ಕಾಣಿಸುತ್ತಿವೆ, ಮಣ್ಣ ಸೇರಿದ ಬೀಜ ಮೊಳಕೆಯೊಡೆದು ಹೊರಚಾಚುವುದು, ಚಿಗುರುತ್ತಿರುವ ಮೋಟುಮರ ಕಾಲದ ಸ್ವರೂಪವನ್ನು ತಿಳಿಸುತ್ತಿದೆ. ಇದೆಲ್ಲ ತಂತಾನೇ ಸಹಜವಾಗಿ ನಡೆಯುತ್ತಿದೆ. ನಿಸರ್ಗ ತನಗೆ ತಾನೇ ರೂಪಿಸಿಕೊಂಡ ಸಹಜ ಚಲನೆಯಿದು. ಸೃಷ್ಟಿರಹಸ್ಯದ ಗುಣಗಳನ್ನು ಕವಿತೆ ಸಮರ್ಥವಾಗಿ ಸೆರೆಹಿಡಿದಿದೆ.

ನಾಲ್ಕು ಅಂಶಗಳ ಮೂಲಕ ಈ ರಹಸ್ಯವನ್ನು ಕಾಣಿಸಲಾಗಿದೆ. ಈ ನಾಲ್ಕರಲ್ಲಿ ಕಾಲವೊಂದೇ ಅಮೂರ್ತವಾದದ್ದು; ಉಳಿದ ಚಿಕ್ಕೆ, ಬೀಜ, ವೋಟುಮರ ಮೂರ್ತವಾದವುಗಳು.

ಇಷ್ಟೆಲ್ಲ ಸ್ಪಷ್ಟಚಿತ್ರಣ ಕೊಟ್ಟ ನಂತರ ದಿಢೀರ್ ಅಂತ ಒಂದು ಪ್ರಶ್ನೆ ಸುನೀತದಲ್ಲಿ ಎದುರಾಗಿದೆ; 'ಹೊಳೆಯ ದಾಟಿದ ಮೇಲೆ ಕೊಳೆಯ ತೊಳೆವವರಾರು?'– 'ತೊಳೆವವರು ಯಾರು?' ಎಂಬ ಪ್ರಶ್ನೆಯೇ ಹೊಳೆಯು ಕೊಳೆಯಾಗಿರುವುದನ್ನು ತಿಳಿಸುತ್ತಿದೆ. 'ಈಜಿದರೆ ಈಜುವುದು ಹರಿವ ನೀರಿನ ಎದರು' ಎಂಬ ಸಾಲು ಸಾಹಸವನ್ನು ಇದಿರುಗೊಳ್ಳುವ ಉತ್ಸಾಹವನ್ನು ಕಾಣಿಸುವುದರ ಜೊತೆಗೆ ಒಂದು ಇಕ್ಕಟ್ಟನ್ನೂ ಕೂಡ ಸೂಚಿಸುತ್ತಿದೆಯೇನೋ; ಹರಿವ ನೀರಿನ ಎದುರು ಈಜುವ ಸ್ಥಿತಿ ಬದುಕಿಗೆ ಒದಗಿದೆ. ಇದನ್ನು ನಾವೇ ಸೃಷ್ಟಿಸಿಕೊಂಡದ್ದೋ, ಅಥವಾ ನಿಸರ್ಗವೇ ಕರುಣಿಸಿದ್ದೋ ತಿಳಿಯುತ್ತಿಲ್ಲ. ಒಟ್ಟಾರೆ ಇಂಥದೊಂದು ಸ್ಥಿತಿಯಂತೂ ನಿರ್ಮಾಣವಾಗಿದೆ. ಈ ಸವಾಲು ಕಣ್ಣೆದುರು ಇದ್ದಾಗಲೂ ಬದುಕನ್ನು ಭ್ರಮೆಯಾಗಿಸಿಕೊಳ್ಳುತ್ತಿದ್ದೇವೆಯೇ? ಎಂಬ ಅನುಮಾನ ಕೂಡ ಇಲ್ಲಿ ಸುಳಿದಾಡಿದೆ.

'ಮಾವು ತಳಿತರೆ ಕೋಗಿಲೆಯ ಕುಕಿಲು ಸಾರ್ಥಕ'– ಮಾವು ಮತ್ತು ಕೋಗಿಲೆಯ ನಡುವೆ ಒಂದು ಅವಿನಾ ಸಂಬಂಧವಿದೆಯೆಂದು ನಾವೆಲ್ಲ ಭಾವಿಸಿದ್ದೇವೆ. ಕವಿತೆಯಲ್ಲಿ ಇವೆರಡರ ನಡುವಿನ ಈ ಸಾರ್ಥಕ ಸಂಬಂಧ ನೆಮ್ಮದಿಯ, ಸಂಭ್ರಮದ ಸೂಚನೆಯನ್ನು ನೀಡುತ್ತಿದೆ. ಎಲ್ಲ ಸಂಬಂಧಗಳು ಹೀಗೆ ಸಾರ್ಥಕವಾಗಬೇಕೆಂಬ ಅಭೀಪ್ಸೆಯು ಕವಿತೆಯ ಒಡಲಲ್ಲಿದೆ. ನಿಸರ್ಗದಲ್ಲಿ ಈ ಸಾರ್ಥಕ ಸಂಬಂಧ ಸಹಜವಾಗಿ ಘಟಿಸಿದರೆ, ಮನುಷ್ಯಜೀವನದಲ್ಲಿ ಇದು ಪ್ರಯತ್ನಪೂರ್ವಕವಾಗಿ ಆಗಬೇಕಾದದ್ದು ಎಂಬ ನಂಬಿಕೆಯನ್ನು ಕವಿತೆ ಮರೆತಿಲ್ಲ.

> 'ಹೂವು–ಹಣ್ಣೂ ಗಿಡದ ಎಡೆಬಿಡದ ಕಾಣಿಕೆ
> ಸಾವೂ–ನೋವೂ ನಮ್ಮ ದಿನದ ಹೊಂದಾಣಿಕೆ'

ಬಿದ್ದ ಹಣ್ಣೆಲೆಯನ್ನು ಗೊಬ್ಬರವಾಗಿ ಪರಿವರ್ತಿಸಿಕೊಳ್ಳುವ ನಿಸರ್ಗದ ಅರಿವಿನಿಂದ ಕಲಿಯದೇ ಹೋದರೆ ಸಾವು–ನೋವುಗಳೇ ನಮ್ಮ ನಿತ್ಯ ಸಂಗಾತಿಗಳಾಗಿಬಿಡುತ್ತವೇನೋ, ನಿಸರ್ಗದ ಪಾಸಿಟಿವ್ ಅಂಶಗಳನ್ನು ಹೇಳುತ್ತಿರುವ ಕವಿತೆ ಬದುಕಿನ ನೆಗೆಟಿವ್ ಅಂಶಗಳನ್ನು ಯಾಕೆ ಇದುರಾಗಿ ಇಡುತ್ತಿದೆಯೋ? ಬಹುಶಃ ಬದುಕನ್ನು ಗಾಜುಗೋಪುರವಾಗಿ ಭಾವಿಸಿಕೊಂಡಿದ್ದುದರ ವ್ಯಂಗ್ಯಕ್ಕಿರಬಹುದೆ? ಕವಿತೆಯ ಸಾಲುಗಳ ನಡುವೆ ಕೊಂಚಮಟ್ಟಿಗೆ ಅಸಂಗತತೆಯೂ ಇದೆ. ಅಲ್ಲದೆ, ಸಾವು–ನೋವಿನ ಹೊಂದಾಣಿಕೆಯಲ್ಲೇ ದಿನ ದೂಡುತ್ತಿರುವ ಮನುಷ್ಯನ ಕಾಣಿಕೆ ಏನು? ಎಂಬ ಪ್ರಶ್ನೆಯೂ ಕವಿತೆಯ ಒಳಗೆ ಇರುವಂತಿದೆ. ನಿಸರ್ಗದಿಂದ ಕಲಿಯಬೇಕಾದದ್ದು ಅಪಾರವಾಗಿದೆಯೆಂಬ ಎಚ್ಚರವನ್ನು ಕಣವಿಯವರ ಸುನೀತಗಳು ಪ್ರಕಟಿಸುತ್ತಲೇ ಬಂದಿವೆ. ಈ ಎಚ್ಚರ ಪ್ರಸ್ತುತ ಸುನೀತದಲ್ಲೂ ಇದೆ.

ಅವರ ಕವಿತೆಗಳಲ್ಲಿ ಸಂಭವಿಸುವ ಇನ್ನೊಂದು ಅಂಶವಿದೆ; ನೋಡಿ, 'ನೆಲಕುದುರಿ ಬಿದ್ದ ಹಣ್ಣೆಲೆಯನ್ನು ಮಣ್ಣುಗೊಬ್ಬರ ಮಾಡಿ ತನ್ನೊಳಗೆ ರುಬ್ಬುವುದು' –ಎಂದು ಹೇಳುವಾಗ 'ರುಬ್ಬುವುದು' ಎಂಬ ಪದ ಹಿಂಸೆಯ ದ್ಯೋತಕವಲ್ಲ, ಹೊಸ ಹುಟ್ಟನ್ನು ಪಡೆದುಕೊಳ್ಳುವುದರ ಸಂಕೇತ. ಹಾಗೆಯೇ 'ಸೂಜಿಯ ಮೊನೆ' ಎಂಬ ಶಬ್ದವೂ ಕೂಡ. ಯಾವ ಶಬ್ದ ಮೇಲ್ನೋಟಕ್ಕೆ ಹಿಂಸೆಯನ್ನು ಸಂಕೇತಿಸಬಲ್ಲದೋ, ಅಂಥ ಶಬ್ದಕ್ಕೆ ಕಣವಿಯವರು ಜೀವನಮೌಲ್ಯಗಳ ಕವಚಧಾರಣೆ ಮಾಡುತ್ತಾರೆ. ಶಬ್ದಕ್ಕಂಟಿದ ಹಿಂಸಾಮುಖವನ್ನು ಕಳಚುವ ಕ್ರಿಯೆ ಅವರ ಕವಿತೆಗಳಲ್ಲಿ ಯಾವಾಗಲೂ ಕಂಡುಬರುವ ಸಂಗತಿ. 'ಶಬ್ದ'ವಷ್ಟೇ ಅಲ್ಲ, ಜೀವನ ಕುರಿತ ಅವರ ಧೋರಣೆಯೂ ಕೂಡ ಇದೇ ಆಗಿದೆ.

ನಾನು ಮೊದಲೇ ಹೇಳಿದಂತೆ, ಕಣವಿಯವರ ಕಾವ್ಯ ವ್ಯಕ್ತಿತ್ವ ಮೊದಲಿನಿಂದಲೂ ಬದುಕಿನ ಆಗುಹೋಗುಗಳನ್ನು ಮನುಷ್ಯ ಪ್ರಯತ್ನದ ಫಲವೆಂದು ನಂಬುತ್ತಾ ಬಂದಿದೆ. ದುಡಿಯುವುದು, ಬೆಳೆಯುವುದು, ಮಾಗುವುದು... ಇವೆಲ್ಲ ಸಾರ್ಥಕ ಬದುಕಿನ ಗುಟ್ಟುಗಳಾಗಿ ಅವರಿಗೆ ಕಂಡಿವೆ. ಈ ಅರ್ಥದಲ್ಲಿ ಕಣವಿಯವರು ಕೂಡ ಸಮಾಜವಾದಿ ಕವಿಗಳೆ.

ಕಣವಿಯವರೆಂದರೆ ಮತ್ತೆ ನೆನಪಾಗುವುದು ಧಾರವಾಡದ ಮಳೆ, ಗುಡ್ಡ, ಕರ್ನಾಟಕ ಕಾಲೇಜು, ವಿದ್ಯಾವರ್ಧಕ ಸಂಘ ಹಾಗೂ ಸಾಹಿತ್ಯ ಬಳಗ. ತಾನು ನಿಂತ ನೆಲವನ್ನು, ಈ ನೆಲದ ಸಂಬಂಧ ಗಟ್ಟಿಗೊಳಿಸಿದ ಬಳಗವನ್ನು ಎದೆಗಪ್ಪಿ ಹಾಡುವ ಬಗೆ ಓದಿಯೇ ಅನುಭವಿಸಬೇಕು. ಮುಗ್ಧತೆ–ಚಿಂತನಶೀಲತೆ–ಆರ್ದ್ರತೆಗಳ ಕೂಡು ಲೋಕವಿದು. ಸಂಬಂಧಗಳ ನಂಬಿಕೆಯ ವಿಶಾಲ ಲೋಕವೇ ಇಲ್ಲಿ ಹರಡಿದೆ. ಕರ್ನಾಟಕ ಕಾಲೇಜಿನ ಮಾಳಿಗೆಯ ಮೇಲೆ ನಿಂತು ನೋಡಿದ ನಿಸರ್ಗಾನುಭವವೇ ಇಲ್ಲಿ ದೀರ್ಘ ಕವಿತೆಯಾಗಿ ಹೊಮ್ಮಿದೆ. ಅದೊಂದು ಅಪೂರ್ವ ಪೇಂಟಿಂಗಿನಂತೆ ಕಂಗೊಳಿಸುತ್ತಿದೆ. ನಿಸರ್ಗದೃಶ್ಯದ ಚಿತ್ರಣವಿದು. ಕಲಾವಲಯದ ಹಲವು ಪ್ರಯೋಗಗಳನ್ನು ಕಣವಿಯವರು ತಮ್ಮ ಕಾವ್ಯದಲ್ಲಿ ಬಳಸುತಿದ್ದಾರೆಯೆ? ಎಂಬ ಅನುಮಾನ ಉಂಟಾಗುತ್ತದೆ. ಭೂದೃಶ್ಯ ಚಿತ್ರಣ, ಭಾವಚಿತ್ರಣ, ಸಂಯೋಜಿತ ಚಿತ್ರಕಲೆ, ಅಮೂರ್ತ ಚಿತ್ರಕಲೆ, ವಾಸ್ತವವಾದಿ ಚಿತ್ರಕಲೆ, ಜನಪದ ಚಿತ್ರಕಲೆ, ಕ್ಯೂಬಿಸಂ, ಮಿನಿಯೇಚರ್ ಇವೆಲ್ಲವುಗಳಿಗೂ ಕಣವಿಯವರ ಕಾವ್ಯಜಗತ್ತಿನಿಂದ ನಿದರ್ಶನಗಳನ್ನು ಕೊಡಬಹುದು. ಚಿತ್ರಕಶಕ್ತಿ ಎಂದರೆ ಏನು? ಎಂದು ಅರ್ಥಮಾಡಿಕೊಳ್ಳುವವರು ಕಣವಿಯವರ ಕಾವ್ಯವನ್ನು ಗಮನಿಸಬೇಕು.


ನಾಡು ನುಡಿಯ ಕುರಿತು ಕನ್ನಡದ ಅತ್ಯುತ್ತಮ ಕಾವ್ಯವನ್ನು ಹೆಕ್ಕುವಾಗ ಕಣವಿಯವರ ಕವಿತೆಗಳನ್ನು ಬಿಡಲು ಸಾಧ್ಯವಿಲ್ಲ. 'ವಿಶ್ವಭಾರತಿಗೆ ಕನ್ನಡದಾರತಿ' ಕವಿತೆ ಕುವೆಂಪು ಅವರಿಗೂ ಅತ್ಯಂತ ಪ್ರಿಯವಾದ ಕವಿತೆ. ಕನ್ನಡ ಪರಂಪರೆಯ ಅಂತಃಸತ್ವ, ಮಾನವೀಯ ಮುಖಗಳನ್ನು ಮುನ್ನೆಲೆಗೆ ತಂದ ಕವಿತೆ. ಕನ್ನಡ ಸಂಸ್ಕೃತಿಯ ವಿಶಾಲ ಅಂತಃಕರಣದ ಕೆಲ ಮಾದರಿಗಳನ್ನು ದರ್ಶಿಸಿದೆ. ವಿಶ್ವಭಾರತಿಗೆ ಕನ್ನಡವು ತನ್ನ

ಯಾವ ಮೌಲ್ಯಗಳಿಂದ ಆರತಿ ಬೆಳಗಬೇಕು? ಎಂಬುದನ್ನು ಹೊಸ ಲಯದಲ್ಲಿ ಕಾವ್ಯ ಕಲ್ಪಿಸಿದೆ.

ಅರಿವೇ ಗುರು, ನುಡಿ ಜ್ಯೋತಿರ್ಲಿಂಗ,
ದಯವೇ ಧರ್ಮದ ಮೂಲತರಂಗ:
ವಿಶ್ವಭಾರತಿಗೆ ಕನ್ನಡದಾರತಿ! ಮೊಳಗಲಿ ಮಂಗಲ ಜಯಭೇರಿ!

ಸ್ಥಳೀಯತೆಯನ್ನು ಗೌರವಿಸಿ, ಪ್ರೀತಿಸಿ ಹಲವು ದಿಕ್ಕಿನ ಗಾಳಿಯನ್ನು ಕಣವಿಯವರ ಕಾವ್ಯ ಸ್ವೀಕರಿಸಿದೆ. ಅವರು ಮಾಡಿರುವ ಕಾವ್ಯದ ಅನುವಾದಗಳಲ್ಲೂ ಇದು ನಿಚ್ಚಳವಾಗಿದೆ. ಆದರೆ, ಮುಖ್ಯವಾಗಿ ಕಾಲದಿಂದ ಕಾಲಕ್ಕೆ ಅವರ ಕಾವ್ಯದ ಸಂವೇದನೆ ಹಿಗ್ಗುತ್ತಾ ಹೋಗಿದ್ದರಲ್ಲೂ ಇದು ದಟ್ಟವಾಗಿದೆ. ಪ್ರಯೋಗಶೀಲತೆ ಮತ್ತು ಚಿಂತನಶೀಲತೆಗಳನ್ನು ಕನ್ನಡದಲ್ಲಿ ಏಳು ದಶಕಗಳವರೆಗೆ ಮುನ್ನಡೆಸಿದ ಕಣವಿಯವರ ಕಾವ್ಯ ಕನ್ನಡದ ಜೀವಜಲದಂತಿದೆ.

■



ಕಾವ್ಯ ಕಣವಿ

ಚೆನ್ನವೀರ ಕಣವಿ ಅವರ ಕಾವ್ಯದ ಕೆಲವು ಚಿತ್ರಗಳು

■

ತಂದೆ ನಸುಕಿನೊಳೆದ್ದು ಅನುಭವಾಮೃತ ಓದೆ
ಸಕ್ಕರೆಯ ನಿದ್ದೆಯಲಿ ಸವಿಯುತ್ತಿದ್ದೆ
ಮುಂಜಾವ ತನ್ನ ಗುಂಜಾರವದಿ ಕಿವಿ ತುಂಬೆ
ನಾದಲಹರಿಯ ನೂಲನೆಳೆಯುತ್ತಿದ್ದೆ.

–ಭಾವಜೀವಿ

■

ನಾವು ಆಡುವ ಮಾತು ಹೀಗಿರಲಿ ಗೆಳೆಯ
ಮೃದುವಚನ ಮೂಲೋಕ ಗೆಲ್ಲುವುದು ತಿಳಿಯ
ಮೌನ ಮೊಗ್ಗೆಯನೊಡೆದು ಮಾತರಳಿ ಬರಲಿ
ಮೂರು ಗಳಿಗೆಯ ಬಾಳು ಮಗಮಗಿಸುತಿರಲಿ.

–ಮಾತು

■

ಎಲ್ಲಿ ಕುಳಿತರು ಬಂದು ಕಿವಿಗೆ ಝೇಂಕರಿಸುವುದು
ಮನೆ ತುಂಬ ಹರಿದಾಡಿ ಮರಿದುಂಬಿ ಗುಂಜನ;
ಕಣ್ಣು ನೀಲಾಂಜನ, ಕರಗಿಸಿದ ನಕ್ಷತ್ರ
ಮೂಗು ಹಟಮಾರಿತನಕೊಡೆದ ಮೊಗ್ಗು–
ಗೋಣು ಹೊರಳಿಸಿ ಸೋಗು ಮಾಡಿ ಕುಣಿವೀ ನವಿಲು
ಎತ್ತಿಕೊಂಡರೆ ಮುಗಿಲತನಕ ಹಿಗ್ಗು!

– ರಂಜನಾ

▪

ಅಯ್ಯನ ಕೈ ನೋವುದೆನಲು
ಆಭರಣವ ಕೊಟ್ಟಳು–
ಅನುಭವದ ಅಲಂಕಾರ
ಆಚರಣೆಯ ತೊಟ್ಟಳು.

ನೆರಳಾದಳು ಬಸವಣ್ಣನ
ಹರಳಾದಳು ಬೆರಳಿಗೆ,
ಅರಳಾದಳು ಲಿಂಗದಲ್ಲಿ
ಪರಿಮಳಿಸುತ ಪೂಜೆಗೆ. –ನೀಲಾಂಬಿಕೆ

▪

ಹೆಸರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ;
ಹಸಿ ಗೋಡೆಯ ಹರಳಿನಂತೆ
ಹುಸಿಹೋಗದ ಕನ್ನಡ.

– ಹೆಸರಾಯಿತು 'ಕರ್ನಾಟಕ'

▪


ನಿನ್ನ ಗುಟ್ಟು ಯಾರಿಗೂ ಬಿಟ್ಟುಕೊಟ್ಟಿಲ್ಲ,
ಅದರ ವಾರಕ್ಕೊಮ್ಮೆ ಬರೂದು ಬಿಟ್ಟಿಲ್ಲ;
ಹಾಂಗ ನೋಡಿದರ 'ನೀಲು'–ನೀ ಬಟಾಬಯಲು
ಆದರೂ ಚಳಿಗಾಲದಾಗ ಇರಲಿ, ತಗೊ–
ಹೊತಗೊ ಈ ಶಾಲು.

–'ನೀಲು'ವಿಗೊಂದು ಶಾಲು

▪

ಬಾಬಾ, ಬಂದು ನಿಂತಿದ್ದಾರೆ ಇವರು
ನಿನ್ನ ಹೆಸರನು ಹೊತ್ತ ಬೀದಿ, ವರ್ತುಲಗಳಲ್ಲಿ
ಎತ್ತರದ ಪ್ರತಿಮೆಗಳ ನೆರಳಿನಲ್ಲಿ
ಹತ್ತಾರು ಬಣಗಳಲಿ ಸಿಡಿದು, ಸಿಡಿಮಿಡಿಗೊಂಡು
ಕುಳಿತ ಬಂಡಿಯ ಕೀಲು ಕಳಚದಂತೆ
ಒಟ್ಟಾಗಿ ಬಂದು ತಳಿರು ತೋರಣಕಟ್ಟಿ
ನಡೆಯಬೇಕಿದೆ ಮುಂದೆ–
ತಮ್ಮ ಕಾಲ ಮೇಲೆಯೆ ತಾವು ನಿಂತು, ಸೋಲರಿಯದ
ನಿನ್ನ ಹಾದಿಯಲ್ಲಿ.

– ಬಿ. ಆರ್. ಡಾ. ಅಂಬೇಡ್ಕರ್ ಕುರಿತು



ಅವರಿವರು ಕಂಡಂತೆ

ಕಣವಿ ಅವರ ಸಾಹಿತ್ಯ-ವ್ಯಕ್ತಿತ್ವ ಕುರಿತು
ಕೆಲವು ಅಭಿಪ್ರಾಯಗಳು

'**ಕಾ**ವ್ಯಾಕ್ಷಿ'ಯ ಮುನ್ನುಡಿಯಲ್ಲಿ ನಾನು ಹೇಳಿದ ಮಾತನ್ನು ಇಂದೂ ಹೇಳಬಹುದು. ಜಾತಿ ಅದೇ. ಆದರೆ ಒಗರು-ಪೊಗರು-ಕಣ-ಕಣದಲ್ಲಿ ಪಿಂಡಗೊಂಡಿದೆ. ವಿನಯವೂ ಅಷ್ಟೇ ದಟ್ಟವಾಗಿದೆ. ವಿನಯ ಹಳಸುವ ಬದುಕಲ್ಲ ವಿಶಿಷ್ಟಕ್ಕೆ ತೊಡಕಲ್ಲ. ಇದು ಧಾರವಾಡದ ತತ್ವ!

– ದ. ರಾ. ಬೇಂದ್ರೆ

■

ಕಣವಿಯವರ ಕಾವ್ಯಮನೋಧರ್ಮವನ್ನು 'ರೊಮ್ಯಾಂಟಿಕ್' ಎಂದು ಗುರುತಿಸುವುದು ವಾಡಿಕೆಯಾಗಿದೆ. ಆದರೆ ಅದು ಇದಕ್ಕಿಂತಲೂ ಹೆಚ್ಚು ಸಂಕೀರ್ಣವಾದ ಮನೋಧರ್ಮ. ಆದರ್ಶವಾದ, ನಿಸರ್ಗಪ್ರೇಮ, ಭಾವನಿಷ್ಠೆ ಇವು ಅವರ ರೊಮ್ಯಾಂಟಿಕ್ ಒಲವುಗಳತ್ತ ಬೊಟ್ಟು ಮಾಡಿ ತೋರಿಸಿದರೆ, ಸಮದರ್ಶನ ಸಮಭಾವ, ಸ್ವೀಕೃತಿಗಳಂಥ ಮೌಲ್ಯಗಳಲ್ಲಿರುವ ಅವರ ನಂಬುಗೆ ಭಾರತೀಯ ಸಂದರ್ಭದಲ್ಲಿ ಅಭಿಜಾತ ಒಲವುಗಳನ್ನೇ ಸೂಚಿಸುತ್ತದೆ. ಸ್ವತಃ ಕಣವಿಯವರಿಗೆ ಈ ಸಂಕೀರ್ಣತೆಯ ಅರಿವಿದೆ.

– ಜಿ. ಎಸ್. ಆಮೂರ

■

ಕಣವಿಯವರು ಮೂಲತಃ ಪ್ರಕೃತಿ ಪ್ರೇಮಿಗಳು, ಜೊತೆಗೆ ಮಾನವತೆಯಲ್ಲಿ ಶ್ರದ್ಧೆಯುಳ್ಳವರು. ಹಾಗಾಗಿ ಅವರು ಪರಸ್ಪರ ಸಮನ್ವಯವನ್ನು ಸಾಧಿಸುತ್ತ, ಸಾಂಗತ್ಯಗೊಳಿಸುತ್ತ ಸೃಷ್ಟಿಸಿದ ಕವಿತೆಗಳು ಬಹುಪ್ರಮಾಣದಲ್ಲಿಯೇ ಇರುವುದನ್ನು ನಾವು ಕಾಣಬಹುದು.

– ಡಾ. ಗುರುಲಿಂಗ ಕಾಪಸೆ

ಕನ್ನಡದಲ್ಲಿ ಕಣವಿಯವರು ಬರೆದಷ್ಟು ಸಂಖ್ಯೆಯ ಸಾನೆಟ್ಟುಗಳನ್ನು ಮತ್ತೆ ಯಾರೂ ಬರೆದಿಲ್ಲ. ಅವುಗಳ ಬಂಧ, ರಚನಾ ಕೌಶಲ, ವಿವಿಧಾನುಭವಗಳನ್ನು ಧ್ಯಾನಕೇಂದ್ರಿತ ಮನಃಸ್ಥಿತಿಯಲ್ಲಿ ಹರಳುಗೊಳಿಸುವ ಪರಿಣತಿ ಯಾರನ್ನೂ ಬೆರಗುಗೊಳಿಸುತ್ತವೆ. ಅದರಲ್ಲಿಯೂ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವ ವ್ಯಕ್ತಿಗಳನ್ನು ಕುರಿತು ಅವರು ಬರೆದ ಬಹು ಸಂಖ್ಯೆಯ ಸಾನೆಟ್ಟುಗಳು ಕಣವಿಯವರು ವಿಸ್ತರಿಸಿಕೊಂಡ ಮಾನವೀಯ ಲೋಕ ಬಾಂಧವ್ಯದ ಪ್ರತೀಕಗಳಂತಿವೆ.

– ಜಿ. ಎಸ್. ಶಿವರುದ್ರಪ್ಪ

■

ಕಾವ್ಯ ಬಂಧದಲ್ಲಿ ಅರ್ಥಪುಷ್ಟಿಗಿಂತ, ನಾದ ಮಾಧುರ್ಯಕ್ಕೆ ಹೆಚ್ಚು ಒತ್ತು ಬೀಳುತ್ತದೆ. ಗೀತೆಗಳ ಸ್ವರೂಪವೇ ಅದು. ಭಾವ ಮತ್ತು ನಾದಗಳಿಲ್ಲಿ ರಮಿಸಲಾದ ಮನಸ್ಸು ಪ್ರಾಯಶಃ ಗೀತೆಗಳ ರಚನೆಗೆ ಸಮರ್ಥವಾಗುವುದಿಲ್ಲ. ಕಣವಿ ಅವರ ಗೀತೆಗಳಲ್ಲಿ ಸಹಜಕವಿಯೊಬ್ಬ ಬರೆದಾಗ ಮಾತ್ರ ಕಾಣಿಸಿಕೊಳ್ಳಬಲ್ಲ ಅನೇಕ ಕಾವ್ಯಾತ್ಮಕ ಹೊಳಹುಗಳು ವಿಶೇಷವಾಗಿ ಕಂಡುಬರುತ್ತವೆ.

– ಎಚ್. ಎಸ್. ವೆಂಕಟೇಶಮೂರ್ತಿ

■


ಕಣವಿಯವರು ತಮ್ಮ ಮೆಲುದನಿಯ, ಸಾವಧಾನದ ನಿರುದ್ವಿಗ್ನ ಚಿಂತನಪರತೆಗೆ ಸಹಜವಾದ ಕಾವ್ಯ ಭಾಷೆಯನ್ನು ನಿರ್ಮಿಸಿಕೊಂಡಿದ್ದು ಅವರ ಸ್ವಂತಿಕೆಯ ನಿದರ್ಶನವಾಗಿದೆ. ಛಂದಸ್ಸಿನ ನಿಯಮಿತಗತಿಯ ಬದಲಾಗಿ ಮಾತಿನ ಸಹಜಗತಿಯನ್ನೇ ಕಣವಿಯವರು ತಮ್ಮ ಪದ್ಯಗಳಲ್ಲಿ ತಳಹದಿಯಾಗಿ ಬಳಸುತ್ತಾರೆ. ಇದಕ್ಕೆ ಹೊಂದಿಕೊಂಡೇ ಅಥವಾ ಇದರಿಂದಾಗಿಯೇ ಅವರ ಕಾವ್ಯದ ನುಡಿಗಟ್ಟು ಕೂಡಾ ನಾಗರಿಕ ಸಂಭಾಷಣೆಯ ಶಿಷ್ಟ ಭಾಷೆಯಾಗಿರುತ್ತದೆ.

– ರಾಜೇಂದ್ರ ಚೆನ್ನಿ

■

ಕಾಲದಂಥ ಮೂಲಭೂತ ಅನುಭವಕ್ಕೆ ಎದುರಾಗುವ ಯಾವ ನಿಗೂಢ ಆಧ್ಯಾತ್ಮಿಕ ವ್ಯವಸ್ಥೆಯನ್ನೂ ಆಶ್ರಯಿಸದೆ, ವಸ್ತುನಿಷ್ಠ ಕಾಲಕ್ಕೆ ಪ್ರತಿಸ್ಪಂದಿಸುವಾಗ ಜೀವಚೈತನ್ಯವನ್ನು ಒರೆಸಿಹಾಕುವ ಭಯಕ್ಕೆ ಆಸ್ಪದಕೊಡದೆ ತಮ್ಮ ಮಾರ್ದವತೆ, ಲಾಲಿತ್ಯ, ಭಾವಗೀತಾತ್ಮಕತೆಯನ್ನು ಉಳಿಸಿಕೊಂಡದ್ದು ಕಣವಿಯವರ ಸೃಜನಶೀಲತೆ ಪಕ್ವಗೊಂಡಿರುವ ಕ್ರಮವನ್ನು ಸೂಚಿಸುತ್ತದೆ. ಜೀವನದ ಸಮಸ್ತ ಸವಾಲುಗಳಿಗೆ ಪ್ರತಿಸ್ಪಂದಿಸುತ್ತಲೇ ತಮ್ಮ ಸೃಜನಶೀಲತೆಯನ್ನು ಉಳಿಸಿಕೊಳ್ಳಬೇಕಾದ ಭಾರತದ ಈಗಿನ ಚಾರಿತ್ರಿಕ ಸಂದರ್ಭದಲ್ಲಿ ಕಣವಿಯವರ ಕಾವ್ಯ ಮಾರ್ಗ ಉದಾರವಾದಿ ಮಾನವತಾ ಧೋರಣೆಯನ್ನು ಹೊಂದಿಯೂ ಅರ್ಥಪೂರ್ಣ ಕಾವ್ಯ ರಚಿಸಬಲ್ಲ ಸಾಧ್ಯತೆಯನ್ನು ಇದು ತೋರಿಸುತ್ತದೆ. ಸಾಂಪ್ರದಾಯಿಕತೆ ಮತ್ತು ಪ್ರಗತಿಪರತೆ ಎರಡೂ ಆಕ್ರಮಣಶೀಲ ಪ್ರವೃತ್ತಿಯ ಮೂಲಕವೇ ತಮ್ಮ ಒಳದ್ರವ್ಯವನ್ನು ಕಾಪಾಡಿಕೊಳ್ಳುತ್ತಿರುವ ಈ ಹೊತ್ತಿನಲ್ಲಿ ಈ ರೀತಿಯ ಲಿಬರಲ್ ಕಾವ್ಯ ನಿಜಕ್ಕೂ ಕುತೂಹಲಕಾರಿಯಾದದ್ದಾಗಿದೆ. ಏಕೆಂದರೆ, ಮೇಲಿನೆರಡು ಕಾವ್ಯ ಮಾರ್ಗಗಳಲ್ಲಿ ತಮ್ಮೊಳಗೆ ಸೇರಿಸಿಕೊಳ್ಳಲಾಗದೇ ಹೋದ ಅನೇಕ ಅರ್ಥಪೂರ್ಣ ಅಂಶಗಳನ್ನು ನಾವು ಇಲ್ಲಿ ಕಾಣಲು ಸಾಧ್ಯವಿದೆ.

– ಡಿ. ಆರ್. ನಾಗರಾಜ್



ಚನ್ನವೀರ ಕಣವಿ
ಸಂಕ್ಷಿಪ್ತ ಜೀವನ ವಿವರ

೧೯೨೮	ಜೂನ್ ೨೮ ಜನನ, ಹೊಂಬಳ, ಗದಗ ಜಿಲ್ಲೆ.
೧೯೩೪-೪೦	ಶಿರುಂದ ಮತ್ತು ಗರಗದಲ್ಲಿ ಪ್ರಾಥಮಿಕ ಶಿಕ್ಷಣ.
೧೯೪೦	ಮುಲ್ಕೀ ಪರೀಕ್ಷೆಯಲ್ಲಿ ತೇರ್ಗಡೆ, ಧಾರವಾಡ ಜಿಲ್ಲೆಗೆ ಪ್ರಥಮ ಸ್ಥಾನ.
೧೯೪೦-೪೬	ಮಾಧ್ಯಮಿಕ ಶಿಕ್ಷಣ, ರಾಜಾ ಲಖಮಗೌಡ ಸರದೇಸಾಯಿ ಮಾಧ್ಯಮಿಕ ಶಾಲೆ ಧಾರವಾಡ.
೧೯೪೬	ಮೆಟ್ರಿಕ್ ಪರಿಕ್ಷೇಯಲ್ಲಿ ತೇರ್ಗಡೆ, ಪ್ರಥಮ ಶ್ರೇಣಿ.
೧೯೪೬-೫೦	ಕರ್ನಾಟಕ ಕಾಲೇಜು, ಧಾರವಾಡ.
೧೯೫೦	ಬಿ.ಎ. ಪ್ರಥಮ ವರ್ಗದಲ್ಲಿ ಪ್ರಥಮ ಸ್ಥಾನ.
೧೯೫೦-೫೨	ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ.
೧೯೫೨	ಮದುವೆ – ಶ್ರೀಮತಿ ಶಾಂತಾದೇವಿಯವರೊಡನೆ.
೧೯೫೨	ಕರ್ನಾಟಕ ವಿಶ್ವವಿದ್ಯಾಲಯ ಪ್ರಸಾರಂಗ – ನಿರ್ದೇಶಕ
೧೯೪೯	ಕಾವ್ಯಾಕ್ಷಿ – ಪ್ರಥಮ ಕವನ ಸಂಗ್ರಹ ಪ್ರಕಟಣೆ
೧೯೫೦	ಭಾವಜೀವಿ – ನೀಳ್ಗವನ ಪ್ರಕಟಣೆ
೧೯೫೫	ಆಕಾಶಬುಟ್ಟಿ ಕವನ ಸಂಗ್ರಹಕ್ಕೆ ಮುಂಬಯಿ ರಾಜ್ಯದ ಪ್ರಥಮ ಬಹುಮಾನ.

೧೯೫೭	ಪ್ರಧಾನ ಕಾರ್ಯದರ್ಶಿ, ಅಖಿಲ ಭಾರತ ೩೯ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಧಾರವಾಡ (ಮಹಾಕವಿ ಕುವೆಂಪು ಸಮ್ಮೇಳನಾಧ್ಯಕ್ಷರು).
೧೯೫೭	ದೀಪಧಾರಿ ಕವನ ಸಂಗ್ರಹಕ್ಕೆ, – ಮೈಸೂರು ರಾಜ್ಯ ಸಂಸ್ಕೃತಿ ಇಲಾಖೆ–ಬಹುಮಾನ.
೧೯೬೧	ಕವಿಗೋಷ್ಠಿಯ ಅಧ್ಯಕ್ಷತೆ, ಅಖಿಲ ಭಾರತ ೪೩ನೆಯ ಸಾಹಿತ್ಯ ಸಮ್ಮೇಳನ, ಗದಗ.
೧೯೬೬	ನೆಲ–ಮುಗಿಲು ಕವನ ಸಂಗ್ರಹಕ್ಕೆ ಮೈಸೂರು ರಾಜ್ಯ ಸಂಸ್ಕೃತಿ ಇಲಾಖೆ ಬಹುಮಾನ.
೧೯೬೯–೭೯	ಕೇಂದ್ರ ಸಾಹಿತ್ಯ ಅಕಾಡೆಮಿ ಜನರಲ್ ಕೌನ್ಸಿಲ್ ಸದಸ್ಯ ಹಾಗೂ ಕನ್ನಡ ಸಲಹಾ ಸಮಿತಿ ಸದಸ್ಯ.
೧೯೭೭–೮೦	ನ್ಯಾಷನಲ್ ಬುಕ್ ಟ್ರಸ್ಟಿನ ಕನ್ನಡ ಸಲಹಾ ಸಮಿತಿ ಸದಸ್ಯ.
೧೯೭೮–೮೪	ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ.
೧೯೮೦	'ಚೆಂಬೆಳಕು' ಅಭಿನಂದನ ಗ್ರಂಥ ಅರ್ಪಣೆ
೧೯೮೧	'ಜೀವಧ್ವನಿ' ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ.
೧೯೮೧–೮೪	ಗೌರವ ಪ್ರಾಧ್ಯಾಪಕ– ಕನ್ನಡ ಅಧ್ಯಯನ ಪೀಠ, ಕ.ವಿ.ವಿ., ಧಾರವಾಡ.
೧೯೮೧ ಮಾರ್ಚ್	ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿ ಉಪಾಧ್ಯಕ್ಷ.
೧೯೮೧ ಏಪ್ರಿಲ್	ಗೋಕಾಕ್ ಚಳುವಳಿ ಪ್ರತಿಬಂಧಕಾಜ್ಞೆ ಮುರಿದು ಬಂಧನಕ್ಕೊಳಗಾದದ್ದು.
೧೯೮೩–೮೮	ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷ.
೧೯೮೩	ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ.
೧೯೮೫	ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ.
೧೯೮೯	ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ.
೧೯೯೩–೯೬	ಹಂಪಿ ಕನ್ನಡ ವಿಶ್ವವಿದ್ಯಾಲಯ ಕಾರ್ಯಕಾರಿ ಮಂಡಳಿ ಸದಸ್ಯ.
೧೯೯೬	ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ– ಅಖಿಲ ಭಾರತ ೬೪ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಹಾಸನ.
೧೯೯೯	ಕರ್ನಾಟಕ ಸರ್ಕಾರದ ಪ್ರತಿಷ್ಠಿತ 'ಪಂಪ ಪ್ರಶಸ್ತಿ'.
೨೦೦೧	ಹಂಪಿ ಕನ್ನಡ ವಿಶ್ವವಿದ್ಯಾಲಯದ 'ನಾಡೋಜ' ಪ್ರಶಸ್ತಿ.
೨೦೦೪	ಕರ್ನಾಟಕ ವಿಶ್ವವಿದ್ಯಾಲಯದಿಂದ ಡಿ.ಲಿಟ್. ಪದವಿ.
೨೦೦೮	ಆಳ್ವಾಸ್–ನುಡಿಸಿರಿ ಸಮ್ಮೇಳನದ ಅಧ್ಯಕ್ಷತೆ.
೨೦೧೧	ಸಾಹಿತ್ಯ ಕಲಾ ಕೌಸ್ತುಭ ಪುರಸ್ಕಾರ.
೨೦೧೬	ಮೈಸೂರು ದಸರಾ ಉದ್ಘಾಟನೆ.
೨೦೧೭	ಸಿದ್ದಗಂಗಾ ಶಿವಕುಮಾರ ಶ್ರೀ ಪ್ರಶಸ್ತಿ.

ಚೆನ್ನವೀರ ಕಣವಿ ಕೃತಿಸೂಚಿ

ಕವನ ಸಂಗ್ರಹ

ಕಾವ್ಯಾಕ್ಷಿ ೧೯೪೯
ಭಾವಜೀವಿ ೧೯೫೦
ಆಕಾಶಬುಟ್ಟಿ ೧೯೫೩
ಮಧುಚಂದ್ರ ೧೯೫೪
ದೀಪಧಾರಿ ೧೯೫೬
ಮಣ್ಣಿನ ಮೆರವಣಿಗೆ ೧೯೬೦
ನೆಲ–ಮುಗಿಲು ೧೯೬೫
ಎರಡು ದಡ ೧೯೬೯
ನಗರದಲ್ಲಿ ನೆರಳು ೧೯೭೪
ಜೀವಧ್ವನಿ ೧೯೮೦
ಕಾರ್ತಿಕದ ಮೋಡ ೧೯೮೬
ಜೀನಿಯಾ ೧೯೮೯
ಹೊಂಬೆಳಕು ೧೯೮೯
(ಮೇಲಿನ ೧೨ ಕವನ ಸಂಗ್ರಹಗಳ ಸಮಗ್ರ ಸಂಪುಟ)
ಶಿಶಿರದಲ್ಲಿ ಬಂದ ಸ್ನೇಹಿತ ೧೯೯೪
ಹಕ್ಕೀ ಪುಚ್ಚ (ಮಕ್ಕಳ ಕವಿತೆಗಳು) ೧೯೮೫

ಆಯ್ದ ಸಂಕಲನಗಳು

ಚಿರಂತನದಾಹ ೧೯೭೫
ಹೂವು ಹೊರಳುವವು ಸೂರ್ಯನ ಕಡೆಗೆ (ಗೇಯ ಗೀತೆಗಳು) ೧೯೮೭
ಮಾನಸ ಪೂಜೆ (ಚಿಂತನ ಕವನಗಳು) ೨೦೦೫

ವಿಮರ್ಶೆ–ಪ್ರಬಂಧ

ಸಾಹಿತ್ಯಚಿಂತನ ೧೯೬೬
ಕಾವ್ಯಾನುಸಂಧಾನ ೧೯೭೧
ಸಮಾಹಿತ ೧೯೭೭
ಸಮತೋಲನ ೧೯೮೯
ವಚನ ತರಂಗ ೧೯೯೯
ಸಾಹಿತ್ಯ ಸಮಾಹಿತ ೨೦೦೬
ಶುಭನುಡಿಯೇ ಹಕ್ಕಿ (ಮುನ್ನುಡಿಗಳು) ೨೦೦೦

ಜೀವನಚರಿತ್ರೆ

ಮಧುರಚೆನ್ನ ೧೯೮೪

ಅನುವಾದ

ಬಾಬಾ ಫರೀದ್ ೧೯೯೩

ಸಂಪಾದಿತ ಕೃತಿಗಳು

ಕನ್ನಡದ ಕಾಲು ಶತಮಾನ ೧೯೬೫
ಸಿದ್ಧಿವಿನಾಯಕ ಮೋದಕ ೧೯೭೦
ಕವಿತೆಗಳು ೧೯೮೦

ಇತರರೊಡನೆ ಸಂಪಾದಿತ

ನವಿಲೂರು ಮನೆಯಿಂದ ೧೯೫೨
ನವ್ಯಧ್ವನಿ ೧೯೫೬
ನೈವೇದ್ಯ ೧೯೬೦
ನಮ್ಮೆಲ್ಲರ ನೆಹರು ೧೯೬೪
ಜೀವನ ಸಿದ್ಧಿ ೧೯೭೧
ಆಧುನಿಕ ಕನ್ನಡ ಕಾವ್ಯ (Modern Kannada Poetry) ೧೯೭೬
ಸುವರ್ಣ ಸಂಪುಟ ೧೯೮೦
ರತ್ನ ಸಂಪುಟ ೧೯೮೫
ದಶವಾರ್ಷಿಕ ಕವಿತೆಗಳು ೧೯೮೫

ಕೆ. ಎಸ್. ನರಸಿಂಹಸ್ವಾಮಿ ಟ್ರಸ್ಟ್ ಪ್ರಕಟಣೆಗಳು

• ಮಾರಿಯ ಕಲ್ಲು ಮತ್ತು ಇತರ ಕತೆಗಳು (ಮಕ್ಕಳ ಸಾಹಿತ್ಯ)	ಕೆ. ಎಸ್. ನರಸಿಂಹಸ್ವಾಮಿ	೫೦.೦೦
• ಕೆ. ಎಸ್. ನರಸಿಂಹಸ್ವಾಮಿ: ಕವಿ ಮತ್ತು ಕಾವ್ಯ	ನರಹಳ್ಳಿ ಬಾಲಸುಬ್ರಹ್ಮಣ್ಯ	೪೦.೦೦
• ಮಕ್ಕಳಿಗಾಗಿ ಕೆ. ಎಸ್. ನರಸಿಂಹಸ್ವಾಮಿ	ನ. ರವಿಕುಮಾರ	೪೦.೦೦
• ಕೆ. ಎಸ್. ನರಸಿಂಹಸ್ವಾಮಿ: ಜೀವನ ಮತ್ತು ಸಾಹಿತ್ಯ	ಸಿ. ಎನ್. ರಾಮಚಂದ್ರನ್	೫೫.೦೦
• ಉಳಿದದ್ದು ಆಕಾಶ (ಕೆ.ಎಸ್.ನ. ಅವರ ಕಾವ್ಯದಲ್ಲಿ ಸಾಮಾಜಿಕತೆಯ ಪರಿಕಲ್ಪನೆ)	ಸುರೇಶ ನಾಗಲಮಡಿಕೆ	೩೫.೦೦
• ಚೆನ್ನವೀರ ಕಣವಿ: ಕವಿ–ಕಾವ್ಯ–ದರ್ಶನ	ವಿಕ್ರಮ ವಿಸಾಜಿ	೨೫.೦೦
• ಅನುರಾಧಾ ಧಾರೇಶ್ವರ– ಕಾವ್ಯ ಗಾಯನ ದರ್ಶನ	ಪ್ರಜ್ಞಾ ಮತ್ತಿಹಳ್ಳಿ	೩೫.೦೦
• ಕಿಕ್ಕೇರಿ: ಸಾಂಸ್ಕೃತಿಕ ನುಡಿ–ನೋಟ	ಎಚ್.ಎಸ್. ಗೋಪಾಲರಾವ್	೫೦.೦೦

ಸಂಪರ್ಕ: ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ (ರಿ). 22/4, ಆಂಜನೇಯ ದೇವಸ್ಥಾನ ರಸ್ತೆ, ಬಸವನಗುಡಿ, ಬೆಂಗಳೂರು – 560 004 ಮೊಬೈಲ್ : 9916796832

ಕಾವ್ಯಾಕ್ಷಿಯ ಮುನ್ನುಡಿಯಲ್ಲಿ ನಾನು ಹೇಳಿದ ಮಾತನ್ನು ಇಂದೂ ಹೇಳಬಹುದು. ಜಾತಿ ಅದೇ. ಆದರೆ, ಒಗರು–ಪೊಗರು–ಕಣಕಣದಲ್ಲಿ ಪಿಂಡಗೊಂಡಿದೆ. ವಿನಯವೂ ಅಷ್ಟೇ ದಟ್ಟವಾಗಿದೆ. ವಿನಯ ಹಳಸುವ ಬದುಕಲ್ಲ ವಿಶಿಷ್ಟಕ್ಕೆ ತೊಡಕಲ್ಲ. ಇದು ಧಾರವಾಡದ ತತ್ವ!

– ದ. ರಾ. ಬೇಂದ್ರೆ

ಜೀವನದ ಸಮಸ್ತ ಸವಾಲುಗಳಿಗೆ ಪ್ರತಿಸ್ಪಂದಿಸುತ್ತಲೇ ತಮ್ಮ ಸೃಜನಶೀಲತೆಯನ್ನು ಉಳಿಸಿಕೊಳ್ಳಬೇಕಾದ ಭಾರತದ ಈಗಿನ ಚಾರಿತ್ರಿಕ ಸಂದರ್ಭದಲ್ಲಿ ಕಣವಿಯವರ ಕಾವ್ಯಮಾರ್ಗ ಉದಾರವಾದಿ ಮಾನವತಾ ಧೋರಣೆಯನ್ನು ಹೊಂದಿಯೂ ಅರ್ಥಪೂರ್ಣ ಕಾವ್ಯ ರಚಿಸಬಲ್ಲ ಸಾಧ್ಯತೆಯನ್ನು ತೋರಿಸುತ್ತದೆ.

– ಡಿ. ಆರ್. ನಾಗರಾಜ್

ಸ್ಥಳೀಯತೆಯನ್ನು ಗೌರವಿಸಿ, ಪ್ರೀತಿಸಿ ಹಲವು ದಿಕ್ಕಿನ ಗಾಳಿಯನ್ನು ಕಣವಿಯವರ ಕಾವ್ಯ ಸ್ವೀಕರಿಸಿದೆ. ಅವರು ಮಾಡಿರುವ ಕಾವ್ಯದ ಅನುವಾದಗಳಲ್ಲೂ ಇದು ನಿಚ್ಚಳವಾಗಿದೆ. ಆದರೆ, ಮುಖ್ಯವಾಗಿ ಕಾಲದಿಂದ ಕಾಲಕ್ಕೆ ಅವರ ಕಾವ್ಯದ ಸಂವೇದನೆ ಹಿಗ್ಗುತ್ತಾ ಹೋಗಿದ್ದರಲ್ಲೂ ಇದು ದಟ್ಟವಾಗಿದೆ. ಪ್ರಯೋಗಶೀಲತೆ ಮತ್ತು ಚಿಂತನಶೀಲತೆಗಳನ್ನು ಕನ್ನಡದಲ್ಲಿ ಏಳು ದಶಕಗಳವರೆಗೆ ಮುನ್ನಡೆಸಿದ ಕಣವಿಯವರ ಕಾವ್ಯ ಕನ್ನಡದ ಜೀವಜಲದಂತಿದೆ.

– ವಿಕ್ರಮ ವಿಸಾಜಿ



ಕೆ. ಎಸ್. ನರಸಿಂಹಸ್ವಾಮಿ ಟ್ರಸ್ಟ್ (ರಿ)
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಚೇರಿ ಆವರಣ, ಮಂಡ್ಯ.